LEGISLATIVE BUSINESS.

Introduction of Bills.

Mr. SPEAKER (Sri V. Venkatappa)—Sri H. C. Dasappa will introduce the Bills.

Sri H. C. DASAPPA (Minister for Finance and Industries).—I beg to introduce:

"(i) The Betting Tax (Second Amendment Bill, 1950
(ii) The Mysore Sales-Tax (Amendment) Bill, 1950
(iii) The Mysore Contingency Fund Bill, 1950"

which were published in the *Mysore Gazette* Extraordinary, dated 14th August 1950 under Rule 36 of the Mysore Legislative Rules.

Sri K. T. BHASHYAM (Minister for Law and Labour).—Sir, I beg to introduce:

"(i) The Mysore Electricity (Taxation on Consumption) Bill, 1950.
(ii) The Code of Civil Procedure (Amendment) Bill, 1950"

which were published in the *Mysore Gazette* Extraordinary, dated 14th August 1950, under Rule 36 of the Mysore Legislative Rules.

Sri H. SIDDAIYA (Minister for Revenue and Excise).—Sir, I beg to introduce the Mysore Alienated Villages (Protection of Tenants and Miscellaneous Provisions) Bill, 1950, published in the *Mysore Gazette* Extraordinary, dated 14th August 1950, under Rule 36 of the Mysore Legislative Rules.

Sri T. MARIAPPA (Home Minister).—I beg to introduce the Mysore Warehouses Bill, 1950, published in the *Mysore Gazette* Extraordinary, dated 14th August 1950, under Rule 36 of the Mysore Legislative Rules.

Presentation of Select Committee Report on the Bangalore Survey Bill.

Mr. SPEAKER.—The Hon'ble Minister for Local Self-Government may now present the Select Committee Report.

Sri R. CHENNIGARAMIAH (Minister for Local Self-Government).—Sir, I beg to present the report of the Select Committee on the Bangalore Survey Bill.

Presentation of the Report of the Committee of Privileges.

Mr. SPEAKER.—As Chairman of the Committee of Privileges, I present the report of the Committee of Privileges under sub-rule 5 of Rule 78 of the Mysore Legislative Rules.

Statement by the Speaker on premature Disclosure of Proceedings of the Select Committee on the Bangalore Survey Bill.

Mr. SPEAKER (Sri V. Venkatappa).—In connection with the Report of the Select Committee on the Bangalore Survey Bill which has just now been presented to the House, I have a few observations to make. It was brought to my notice some time ago that a report had appeared in certain newspapers of an interview by certain press representatives with the Minister for Local Self-Government when he visited Madras. I found that in "The Mail" dated 24th June 1950 the following report appeared under the heading "Mysore Minister praises Madras Corporation":

"The Select Committee on the Mysore Survey Bill, he (Sri Chennigaramiah) said, objected to some of the provisions, principally because it was not in conformity with the Madras measure and suggested that the Bill should be dropped. In the circumstances, he wished to study the Madras Survey Act for drafting a suitable Bill for introduction in the Mysore Legislature."

As Honourable Members are aware, it is a well established convention that nothing which transpires at a meeting of a Select Committee should be made public before its report is actually presented to the House. There are innumerable authorities for this position; but I do not propose to refer to them. I wrote to the Minister for Local Self-Government as well as to the Editor of "The Mail" in this matter. The Minister has replied that as he is aware of the Parliamentary convention he did not disclose what transpired in the

Select Committee and he expressed his regret for such matter having appeared in the Press. "The Mail" has replied to say that the report was a faithful recording of the Minister's statement and the paper was not aware that in publishing it they were committing any offence. It adds that the report was published in good faith and there was no intention to infringe any privilege of the Legislature.

In the circumstances, I do not propose to take any further notice of this matter. But I do hope that the Hon'ble Members of this House and the Press will cooperate with the Chair in future in maintaining the well established conventions of Parliamentary procedure.

Statement laid on the Table.

Working of Elementary Education Act for 1949-50.

Mr. SPEAKER (Sri Venkatappa).—The Hon'ble Minister for Education may lay on the table the statement on the working of the Elementary Education Act for 1949-50.

Sri T. SIDDALINGAIYA (Minister for Education and Public Health).—Sir, I beg to lay on the table a statement on the working of the Elementary Education Act for 1949-50 as required by Section 41 of the Elementary Education Act, 1941.

RAJPRAMUKH'S SPEECH.

Debate on Address.

Mr. SPEAKER (Sri V. Venkatappa).—Sri G. A. Acharya will continue the debate. I think we should decide to restrict the time limit for speeches, because we have to close the debate at 3-30 P.M. Will ten minutes be enough for each member?

SEVERAL HONOURABLE MEMBERS.—Yes.

Sri G. A. ACHARYA (Bangalore District—General).—Janab Mahomed Imam yesterday raised a very pertinent and an apt question and asked as to how the Government can get money now. He is in the habit of putting question and answering it himself. I will just tell you the question that was put by him and how show how he has answered it himself.

Mr. SPEAKER.—The Hon'ble Member need not answer him.

Sri G. A. ACHARYA.—He was rather confused in his answer. About 3 or 4 years ago, when the question of accession of Mysore came,—if I am wrong Janab Mahomed Imam may correct me, but unfortunately he is not here,—Janab Mahomed Imam was telling that he would like to see that Mysore was completely independent. He said "we would like to have our own mint, our own currency, our own foreign affairs, etc.". He would again say, "you did not follow and give heed to my advice." It is all very well to say that. But any man can see what has happened in India. Did we ask for partition? Did we expect partition or anything of that kind? It all depends upon how you take it as to who exactly is responsible. He was telling yesterday, what would happen if you do not get money? Well, Heavens will not fall. There will be the State of Mysore, there will be the people of India and there will be the Government of India. I cannot understand why he is growing so pessimistic as he was yesterday. Talking of financial matters he said that we were not consulted about the financial integration, that the Chief Minister went to Delhi, consented to the scheme and returned and asked us for acceptance of the same, I would like to read this passage which will explain the position as to the advantage of this integration.

"Advantages of Integrated System of Federal Finance..... .....Firstly, their people and Governments will take their place in the policy of India alongside of the people and Governments in the rest of India and share in its wider life with equal rights and obligations. Secondly, administrative standards and efficiency will increase by closer contacts with the administration of the Central Government and especially by the uniform accounting and Audit system which will result from the supervision of the Auditor-General of India, recruitment to the higher services on all All-India basis, a unified judicial system and access to technical advice and assistance furnished by the Central Government. Thirdly, States will have their share of

such federal revenues as may be made divisible from time to time and of the grants, loans and other forms of financial assistance given by the Centre on the same basis as Provinces, an impetus will thus be given to development programmes in these areas....."

No doubt the Centre cannot be strong unless the units are strong. I think one or two speakers said that by the financial integration we cannot hope to get anything at all. As a matter of fact how can the Centre be strong if we are not strong? Supposing there is a productive work which is capable of yielding revenue and at the same time is capable of improving the economic position of the State. Do you think that the Centre will keep quiet? We have unanimously accepted this and I cannot understand as to why we should suspect the Centre that they are not going to hear us. Supposing you present a scheme and it is capable of giving results and improving your revenues. I do not think our Ministers are so incompetent as to present the case of Mysore before the Centre and get 'No'. I do believe that our present Ministers are capable of presenting the case boldly.

In regard to services, I know who ruled Mysore during the troublous times. As a matter of fact, Sirdar Vallabhai Patel while defending the Services, said—I will recall to my mind a caricature of Shanker in the Shanker's Weekly—" if you do not want the services, I go with them.' I am sure our present Ministry will see that no injustice is done to our Services. It must be recognized that after all it is not Ministers who rule but those that execute the policy. They are there only to dictate and give suggestions by way of policy. The real people who execute their policy are our Civil Services. As has been brought out by my friends, if there is really any injustice, if really our Mysore Civil Service officers were to be deprived of any legitimate claim or any thing of of that kind, I am sure the present Ministry will stand by them, for after all it is they who actually execute their policy and do more work than Ministers sometimes. No doubt they feel too much; surely they have got to think about their future. In this, my own view is that utmost sympathy and consideration must be shown to the officers. All that is possible must be done in regard to the safety and security of our administrative officers. I must certainly say that I agree with Janab Mahomed Imam in certain of his remarks. Yes, it is a fact that our finances are not as sound as it ought to be. In my own judgment there has been sometimes not a cautious conservative policy while spending. I will give an example. If you want to help an industry what difference it would make between asking for a banker guaranteeing it and the Government themselves giving a loan? It makes very much difference for the exchequer of Mysore. When the Government guarantees a certain definite payment to be advanced to a certain party, they are not deciding the question of interest. The banker who asks for interest, pays income-tax to our exchequer and not only that, I have seen very minutely the present finances of our State and I regret to say that it requires a lot of improvement. Because, after all you have got to find out somehow or other money because if the productive instruments are not looked after properly and if they are not fitted properly, the result will be that what we are now getting we may not get at all. The Government themselves are running industries and this need lot of funds. No doubt funds are not available. But I am sure Mysore has carried a name and Mysore's economy is sound although to-day we may not be able to gather funds immediately. Take for instance the generation of electricity. Show me any other investment which is giving you as much yield as that. It is not merely the yield that should be the consideration, I agree. But we must also consider as to what is the indirect benefit to the people. Therefore so far as money is concerned, if our Government put up a strong fight and present all their demands and all the commitments that they have so far made, I am definitely certain that so far as Mysore industries and Mysore productive ventures are concerned, we will get that

much that, we deserve from the Central Government.

With these few words, I once again thank His Highness for the Address that he has given to us.

Janab SYED ABDUR RAHMAN (Chikmagalur *cum* Shimoga–Muslim).—Sir, I beg to associate myself with the Address of Thanks to His Highness the Maharaja, for the gracious Address which he delivered to this august Assembly in this session. Sir, his simple but moving words which relate to the events of to-day, his reference to the policy and programme of the Government of Mysore and the feeling terms in which he referred to some of the unfortunate happenings and the sorrows and the sufferings of the people in some parts of India, are a tribute to his great personality, to his national aspirations and to his helpful attitude in all that concerns the welfare of the people of India in general and the welfare of the people of Mysore in particular. In tendering my respectful thanks to His Highness for his gracious Address I wish him all prosperity and happiness.

His Highness in his Address has referred to the Korean conflict and in doing so, he has said that the attitude taken up by the Prime Minister of India was an act of supreme statesmanship and when His Highness said so, he did really voice the feelings of the people of Mysore. There can be no doubt about it. I strongly feel that the attitude that the Prime Minister of India took up with regard to the Korean question, will certainly be appreciated by the United Nations and all the people of the countries will realise that the suggestion made by Pandit Nehru is the only solution of the Korean conflict. There can perhaps be no other alternative.

His Highness has been pleased to refer to the Kashmir issue. On this matter I certainly feel that the citizens of India are sorry that in spite of the best efforts made by the Prime Minister of India, no settlement with regard to the Kashmir issue has been reached. We expected after the Indo-Pakistan Pact that a new era of prosperity will dawn on these two great dominions, and closer ties of friendship will prevail which would ensure safety and prosperity for both the Dominions. But unfortunately we see that in spite of the best efforts of India, the matter has again receded to the background. We feel on this matter very strongly. We feel, and we want to say from the floor of this House, that we Muslims of India are there to defend the stand taken by Pandit Nehru and to defend India even if it be at the cost of our lives. Let me say to-day without a shadow of doubt that we are with Pandit Nehru. We are true citizens of India and our love and respect for Pandit Nehru are great and we shall always be to him the true and obedient sons as he desires us to be in any matter that concerns the welfare of India. Therefore we feel that sooner or later a time will come when we shall be able to settle our Kashmir dispute, so that a new era of prosperity will dawn not only on the Dominion of India but also for the Dominion of Pakistan.

Interruption.

We Muslims of India are determined to take up and defend the stand taken up by our Prime Minister Pandit Nehru even at the cost of our lives. (*Cries of Hear! Hear*) (*Interruption*) I speak for all. I am not mincing matters.

Sir, His Highness has been pleased to make reference to seasonal conditions in Mysore. Mysore is a very lucky State. The Ministry also is luckier still. The Ministry had to pass through several trying situations and conditions for the last so many months—failure of rains, drying up of Krishnarajasagara, food situation, failure of sugarcane crop in Mandya. All these things were there. But in the course of three months we see that the position is almost transformed into something very hopeful. I feel that in the course of the next three or four months we shall be able to get almost what we want. By the act of Providence the Krishnarajasagara is full. By the act of Providence we have had enough of

rains and we shall have a good percentage of crops. Even though our food position may not be quite satisfactory at present, by about October or November, I think, we shall have something to replenish our stocks of foodgrains from the Centre, although they have not made any promise. According to my study of the position, by going through the literature placed in connection with the Grow More Food Scheme, the areas that are now being brought under cultivation, some of the works to which a reference has been made and the electricity supplied for use, there is no reason why we should not be able to improve the food situation in Mysore. I said we are lucky, only after looking at the other Provinces. Look at Assam. Unfortunately for Assam and fortunately for the Uttar Pradesh and Bihar there have been happenings which have resulted in much suffering. Fortunately we are much better of in Mysore than in any of the Provinces. If only we make a determined effort and if we see that some of the schemes are put into operation and worked successfully through the united co-operation of all the people of Mysore, on whom is cast the duty of improving the food position, I think we will certainly do better.

There was some criticism with regard to the distribution scheme, subsidies and all that. The subsidy is being made up by increasing the issue price and that will naturally bring some revenue to Government. But that does not bring a corresponding relief to the consumer. There is some real grievance with regard to the distribution of food. With regard to this, arrangements may not have been very satisfactory. It is in that direction that we should strive better. I think and feel that with a proper and judicious distribution of foodgrains, from the stocks that we might get hereafter, Mysore certainly will be in a better position to say that its food position on the whole will not be so bad as it looks to be. With regard to those schemes my suggestion is this. For working out all those schemes which are there in connection with the Grow More Food Campaign, Grow More Food etc., if keener interest is evinced by Government themselves in this matter, I am sure they will be able to do better and produce better results. With these few words, I whole-heartedly accept the resolution of Address of Thanks moved by Hon'ble Sri T. Subramanya.

ಶ್ರೀ ಕಡಿದಾಳ್ ಮಂಜಪ್ಪನವರು (ಶಿವಮೊಗ್ಗ ಜಿಲ್ಲೆ).—ಮಾನ್ಯ ಅಧ್ಯಕ್ಷರೇ, ರಾಜಪ್ರಮುಖರ ಭಾಷಣವನ್ನು ಸ್ವಾಗತಿಸುತ್ತಾ ಕೆಲವು ವಿಚಾರಗಳನ್ನು ಮಾತ್ರ ನಾನು ಈ ಮಾನ್ಯ ಸಭೆಯ ಗಮನಕ್ಕೆ ತರಲಿಚ್ಛಿಸುತ್ತೇನೆ. ರಾಜಪ್ರಮುಖರ ಭಾಷಣದಲ್ಲಿ ಅವರು ಜನರ ಮನಸ್ಸನ್ನು ಎಳೆಯತಕ್ಕ ಅನೇಕ ಮುಖ್ಯ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಮುಖ್ಯವಾಗಿ ಆಹಾರ ಭಾವ ಮತ್ತು ಇದರಂತೆಯೇ ಇನ್ನು ಕೆಲವು ಹೆಚ್ಚಾಗಿ ಪ್ರಾಶಸ್ತ್ಯ ಕೊಡಬೇಕಾದ ವಿಚಾರಗಳನ್ನು ಅವರು ಪ್ರಸ್ತಾಪಿಸಿದ್ದಾರೆ. ಈಗಿನ ಆರ್ಥಿಕ ಮುಗ್ಗಟ್ಟಿನ ಕಾಲದಲ್ಲಿ ಸರ್ಕಾರ ಏನೇನು ಸಾಧಿಸಿದೆ, ಏನೇನು ಸಾಧಿಸಲು ಪ್ರಯತ್ನಪಡುತ್ತಿದೆ ಎಂಬುದನ್ನೆಲ್ಲಾ ಪ್ರಸ್ತಾಪಿಸಿದ್ದಾರೆ. ಇದಕ್ಕಿಂತಲೂ ಹೆಚ್ಚು ವಿಷಯಗಳನ್ನು ರಾಜಪ್ರಮುಖರ ಭಾಷಣದಲ್ಲಿ ಪ್ರಸ್ತಾಪಿಸುವುದು ಸೂಕ್ತವಲ್ಲವೆಂದು ನನ್ನ ಅಭಿಪ್ರಾಯ.

ನೆನ್ನೆಯ ದಿವಸ ಮಾತನಾಡಿದ ಜನಾಬ್ ಇಮಾಂರವರು ಅನೇಕ ವಿಧವಾಗಿ ಸರ್ಕಾರದ ರೀತಿ ನೀತಿಗಳನ್ನು ಟೀಕಿಸಿದ್ದಾರೆ. ಹೆಚ್ಚಿಗೆ ಆಹಾರ ಧಾನ್ಯವನ್ನು ಬೆಳೆಯುವ ಯೋಜನೆಯ ವಿಚಾರದಲ್ಲಿ ಸರ್ಕಾರದವರು ಅನುಸರಿಸಿರುವ ನೀತಿಯನ್ನು ಅವರು ತೀವ್ರವಾಗಿ ಖಂಡಿಸಿದ್ದಾರೆ. ಈ ಸಂದರ್ಭದಲ್ಲಿ ನಾನು ಎರಡು ವಿಚಾರಗಳನ್ನು ಮಾತ್ರ ಹೇಳಬಯಸುತ್ತೇನೆ. ನಾನು ಮೈಸೂರು ದೇಶದ ಕಣಜ ಎನಿಸಿಕೊಂಡಿರುವ ಮಲೆನಾಡಿನವನು, ರೈತರ ಕಷ್ಟ ಸುಖಗಳನ್ನು ತಿಳಿದುಕೊಂಡಿರುವವನು. ಜನಾಬ್ ಇಮಾಂರವರು ಕೂಡ ವ್ಯವಸಾಯಗಾರರ ಕುಟುಂಬದಿಂದ ಬಂದಿರುವವರು. ಅವರು ರೈತರ ಕಷ್ಟ ಸುಖಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಆದರೆ ನೆನ್ನೆಯ ದಿವಸ ಅವರ ಭಾಷಣವನ್ನು ಕೇಳಿ ನನಗೆ ಆಶ್ಚರ್ಯವಾಯಿತು!

ಜನಾಬ್ ಮಹಮ್ಮದ್ ಇಮಾಂರವರು.—ನಾನು ಮಲೆನಾಡಿನವನಲ್ಲ.

ಶ್ರೀ ಕಡಿದಾಳ್ ಮಂಜಪ್ಪನವರು.—ಮೈದಾನದಲ್ಲೂ ವ್ಯವಸಾಯಮಾಡುವ ರೈತರಿದ್ದಾರೆ.

ನಮ್ಮ ದೇಶದ ವಿಚಾರ ಜನಾಬ್ ಇಮಾಂರವರಿಗೆ ಚೆನ್ನಾಗಿ ಗೊತ್ತಿದೆ. ನಮ್ಮ ದೇಶದಲ್ಲಿ ಶೇಕಡ 75ರಷ್ಟು ಜನ ರೈತರು, ವ್ಯವಸಾಯದಿಂದ ಜೀವಿಸುವವರು. 1943ನೆಯ ಸಾಲಿನಿಂದಲೂ ಈ ಹತೋಟಿಗಳು ಬೇಡವೆಂದು ಹೇಳುತ್ತಿರುವವರಲ್ಲಿ ನಾನೂ ಒಬ್ಬನು. ಪಟ್ಟಣಗಳಲ್ಲಿ ವಾಸಿಸುವ ಕೇವಲ 15 ಲಕ್ಷ ಜನರಿಗಾಗಿ ಮಾತ್ರ ಈ ಹತೋಟಿ ವ್ಯವಸ್ಥೆಯನ್ನು ಜಾರಿಗೆ ತಂದಿರುವುದು ಒಳ್ಳೆಯದಲ್ಲವೆಂದು ಹೇಳುತ್ತಲೇ ಇದ್ದೇನೆ. ಕಳೆದ ಏಳುವರ್ಷಗಳಿಂದ ಈ ಆಹಾರ ಹತೋಟಿಯ ದೆಸೆಯಿಂದ ನಮ್ಮ ಸರ್ಕಾರಕ್ಕೆ ಎಂಟೂವರೆ ಕೋಟಿ ರೂಪಾಯಿ ನಷ್ಟವಾಗಿದೆ. ಈ ನಷ್ಟ ಬರಿಯ ಪಟ್ಟಣದವರ ಮೇಲೆ ಬೀಳುತ್ತಿಲ್ಲ, ಇಡೀ ದೇಶದ ಜನರ ಮೇಲೆ ಬೀಳುತ್ತಿದೆ. ಶೇಕಡ 75ರಷ್ಟು ಇರುವ ಹಳ್ಳಿಗರ ಮೇಲೆ ಬೀಳುತ್ತಿದೆ. ಪಟ್ಟಣಗಳಲ್ಲಿ ವಾಸಮಾಡುವ ಕೇವಲ 15 ಲಕ್ಷ ಜನರ ಅನುಕೂಲಕ್ಕಾಗಿ ಹತೋಟಿಯನ್ನಿಟ್ಟುಕೊಂಡು ಇದರಿಂದ 8½ ಕೋಟಿ ರೂಪಾಯಿ ನಷ್ಟ ಮಾಡಿಕೊಂಡು ಇದನ್ನು

ನಂಸ್ಥಾನದ ಎಲ್ಲ ಜನರ ತಲೆಯಮೇಲೆ ಹೊರಿಸುವುದು ಯಾವ ನ್ಯಾಯ ಎಂಬುದನ್ನು ನಮ್ಮ ಸ್ನೇಹಿತರು ಗಮನಿಸಬೇಕು. ಸ್ವಾಮಿ, ಈಚೆಗೆ ಪಟ್ಟಣಗಳಲ್ಲಿ ಬಂದು ನೆಲಸತಕ್ಕವರ ಸಂಖ್ಯೆ ಹೆಚ್ಚಾಗುತ್ತಿದೆ, ಪಟ್ಟಣಗಳಲ್ಲಿ ಸುಖಜೀವನವನ್ನು ಬಯಸಿ ವಾಸಮಾಡಲಿಚ್ಛಿಸುವವರು ಪಟ್ಟಣ ವಾಸದ ಕಷ್ಟವನ್ನೂ ಸಹಿಸಲು ಸಿದ್ಧರಾಗಿರಬೇಕು. ಎಲ್ಲಿಯವರೆಗೆ ನಿರಾತಂಕವಾಗಿ ರೂಪಾಯಿಗೆ ಎರಡೂವರೆ ಮೂರು ಸೇರಿನಂತೆ ಅಕ್ಕಿಯನ್ನು ಜನರಿಗೆ ತೊಂದರೆಯಿಲ್ಲದಂತೆ ಕೊಡುತ್ತಾರೆಯೋ ಅಲ್ಲಿಯವರೆಗೆ ಜನರು ಹಳ್ಳಿಗಳಿಗೆ ಹೋಗುವುದಿಲ್ಲ, ದೇಶದ ಆಹಾರ ಪರಿಸ್ಥಿತಿ ಉತ್ತಮವಾಗುವುದಿಲ್ಲವೆಂದು ಖಂಡಿತವಾಗಿ ಹೇಳುತ್ತೇನೆ. ಸರ್ಕಾರದವರು ಹಳ್ಳಿಯವರಿಗೆ ಬೇಕಾಗುವ ಬಟ್ಟೆ, ಕಬ್ಬಿಣ, ಮುಂತಾದ ಸಾಮಾನುಗಳನ್ನು ತಾವು ಹೆಚ್ಚಿನ ದರದಲ್ಲಿ ಕೊಂಡು ಅವರಿಗೆ ಕಡಿಮೆ ದರದಲ್ಲಿ ಮಾರಾಟಮಾಡುವುದಿಲ್ಲ. ಹೀಗಿರುವಾಗ ಏಕೆ ಪಟ್ಟಣಗಳಲ್ಲಿ ವಾಸಮಾಡುವವರಿಗೆ ತಾವು ಹೆಚ್ಚು ದರದಲ್ಲಿ ಆಹಾರ ಧಾನ್ಯವನ್ನು ಕೊಂಡು ಕಡಿಮೆ ದರದಲ್ಲಿ ಮಾರಬೇಕು? ನನ್ನ ಮಿತ್ರರಾದ ಶ್ರೀ ಚೆನ್ನಬಸಪ್ಪನವರು ಎಲ್ಲರ ಮನಸ್ಸಿಗೆ ನಾಟುವಹಾಗೆ ವ್ಯವಸಾಯಗಾರರ ಸ್ಥಿತಿಯನ್ನು ಚಿತ್ರಿಸಿದ್ದಾರೆ. ಸರ್ಕಾರದವರು ಇಷ್ಟು ಪ್ರೋತ್ಸಾಹ ಕೊಡುತ್ತಿದ್ದರೂ ಕೂಡ ವ್ಯವಸಾಯ ಹೀನಸ್ಥಿತಿಗೇ ಬರುತ್ತಿದೆಯೆಂದು ಒಂದು ದೃಷ್ಟಿಯಿಂದ ಹೇಳಬಹುದು. ಬಸ್ಸು ಸರ್ವಿಸ್ ಇಡುವವರು ಬಂದರೆ ಅವರಿಗೆ ಪ್ರೋತ್ಸಾಹ ಕೊಡುತ್ತಾ ಇಲ್ಲ. ಲಾಯರು ಆಗುವವರಿದ್ದರೆ ಅವರಿಗೆಪ್ರೋತ್ಸಾಹ ಕೊಡುತ್ತಾ ಇಲ್ಲ. ಏಕೆಂದರೆ, ಆ ಕನಬುಗಳಲ್ಲಿ ಫಾಯಿದೆ ಇದೆ. ವ್ಯವಸಾಯದಲ್ಲಿಯೂ ಹೀಗೆಯೇ ಫಾಯಿದೆ ಇದ್ದಿದ್ದರೆ ಪಟ್ಟಣಗಳಲ್ಲಿರುವವರು ಹಳ್ಳಿಗಳಿಗೆ ಹೋಗಿ ನೆಲಸುತ್ತಿದ್ದರು. ಮುಖ್ಯವಾಗಿ ಪಟ್ಟಣಗಳಲ್ಲಿರುವವರ ಮನಸ್ಸಿನಲ್ಲಿ ತಾವು ಹಳ್ಳಿಗಳಿಗೆ ಹೋಗಿ ವಾಸಮಾಡಬೇಕು, ದೇಶ ಉದ್ಧಾರವಾಗಬೇಕು, ನಾವೂ ಉದ್ಧಾರವಾಗಬೇಕು ಎಂಬ ಭಾವನೆ ಬರುವಹಾಗೆ ಮಾಡಬೇಕು. ಇನ್ನೂ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ಎಲ್ಲಿಯವರೆಗೆ ಆಹಾರ ಧಾನ್ಯಗಳ ಹತೋಟಿ ಜಾರಿಯಲ್ಲಿ ಇರುತ್ತದೆಯೋ ಅಲ್ಲಿಯವರೆಗೆ ನಮ್ಮ ಆಹಾರ ಪರಿಸ್ಥಿತಿ ಉತ್ತಮಗೊಳ್ಳುವುದಿಲ್ಲವೆಂದು ಹೇಳಬಹುದು. ಈ ವಿಚಾರದಲ್ಲಿ ಕೇಂದ್ರ ಸರ್ಕಾರದವರೊಡನೆ ನಮ್ಮ ಸರ್ಕಾರದವರೂ ಬಹುವಾಗಿ ಪ್ರಯತ್ನಪಡುತ್ತಿದ್ದಾರೆ. ಈ ಪ್ರಯತ್ನ ಸ್ವಲ್ಪ ಮಟ್ಟಿಗೆ ಯಶಸ್ವಿಯಾಗಬಹುದು, ಆದರೆ ಪೂರ್ಣವಾಗಿ ಖಂಡಿತವಾಗಿಯೂ ಆಗುವುದಿಲ್ಲ. ಇನ್ನು ನಾಲ್ಕೈದು ವರ್ಷಗಳಾದರೆ ಇದರ ಸತ್ಯವು ತಿಳಿಯುತ್ತದೆ.

ಶ್ರೀ ಎಸ್. ರಂಗರಾಮಯ್ಯನವರು.—ಶ್ರೀ ಮಂಜಪ್ಪನವರೂ ಪಟ್ಟಣದಲ್ಲಿ ವಾಸಮಾಡುತ್ತಿದ್ದಾರೆ; ಶಿವಮೊಗ್ಗ ಟ್ರೌನಲ್ಲಿದ್ದಾರೆ.

ಶ್ರೀ ಕಡಿದಾಳ್ ಮಂಜಪ್ಪನವರು.—ಆದರೇನು! ಒಂದು ಕಡೆ ಸರ್ಕಾರದ ಬೊಕ್ಕಸವನ್ನು ಬರಿದುಮಾಡಿದರೆಂದು ಟೀಕಿಸುವುದು, ಇನ್ನೊಂದು ಕಡೆ ಆಹಾರಕ್ಕೆ ಇನ್ನೂ ಹೆಚ್ಚು ಸಹಾಯದ್ರವ್ಯ ಕೊಟ್ಟು ಪಟ್ಟಣದವರಿಗೆ ಹೆಚ್ಚುದವನ ಒದಗಿಸಿ ಎಂದು ಹೇಳುವುದು.—ಇವು ಒಂದಕ್ಕೊಂದು ವಿರುದ್ಧವಾದ ಅಭಿಪ್ರಾಯಗಳು. ಎರಡನ್ನೂ ಹೊಂದಿಸುವುದು ಹೇಗೆ ಸಾಧ್ಯ!

ಇನ್ನು ಸರ್ಕಾರದವರು ಕ್ಯಾಪಿಟಲ್ ವರ್ಕ್ಸ್ ನಿಲ್ಲಿಸಿದ್ದಾರೆಂದು ಜನಾಬ್ ಇಮಾಂರವರು ಟೀಕಿಸಿ ಅವನ್ನು ನಿಲ್ಲಿಸಬಾರದೆಂದು ಹೇಳಿದರು. ನನ್ನ ಅಭಿಪ್ರಾಯದಲ್ಲಿ, ನಾವು ಸುಮ್ಮನೆ ಏನೋ ಒಂದು ಉತ್ಸಾಹದಲ್ಲಿ ಎಲ್ಲಾ ಕಾಮಗಾರಿಗಳನ್ನೂ ಕಾರ್ಯಗತಮಾಡುತ್ತೇವೆಂದು ಮುಂದುವರಿದರೆ ಅದರಿಂದ ನಮಗೆ ನಷ್ಟವಾಗಬಹುದೆಂದು ನನಗೆನಿಸುತ್ತದೆ. ಎಲ್ಲಾ ಕಾಮಗಾರಿಗಳೂ ದೇಶಕ್ಕೆ ಅತ್ಯಾವಶ್ಯಕವೇನೋ ಹೌದು. ಆದರೆ ನಮ್ಮ ಹಣಕಾಸಿನ ಪರಿಸ್ಥಿತಿ ಹೇಗಿದೆ ಎಂಬುದನ್ನು ಮೊದಲು ವಿಚಾರಮಾಡಬೇಕು. ನನ್ನ ಆ ಸ್ನೇಹಿತರು ಇಪ್ಪತ್ತು ಮಟ್ಟಿಗೆ ಟೀಕಿಸಿದರೂ ಕೂಡ ಸಂಸ್ಥಾನದ ಆದಾಯವನ್ನು ಯಾವ ರೀತಿ ಹೆಚ್ಚಿಸಬಹುದೆಂಬ ಬಗ್ಗೆ ಒಂದು ಸಲಹೆಯನ್ನು ಕೂಡ ಕೊಡಲಿಲ್ಲ. ಮುಖ್ಯವಾಗಿ ನಮಗೆ ಈಗ ಬೇಕಾಗಿರುವುದು ಹೆಚ್ಚು ಹಣ. ನಮ್ಮ ಸಂಸ್ಥಾನದ ಉತ್ಪತ್ತಿ ಇಂದು ಹನ್ನೊಂದುಕೋಟಿ ರೂಪಾಯಿ ಇರುವುದು. ಕನಿಷ್ಟಪಕ್ಷ ಇಪ್ಪತ್ತೆರಡು ಕೋಟಿಯಾಗಬೇಕು. ಇದಕ್ಕೆ ಮಾರ್ಗಗಳನ್ನು ಹುಡುಕುವುದು ಅತ್ಯಾವಶ್ಯಕವಾಗಿದೆ. ನನ್ನ ಅಭಿಪ್ರಾಯದಲ್ಲಿ ಹೋಟೆಲುಗಳ ಮೇಲೆ ಲೈಸೆನ್ಸ್ ತೆರಿಗೆ ಹಾಕಬೇಕು. ಇದರಿಂದ ಸರ್ಕಾರ ಸ್ವಲ್ಪ ಹಣ ಪಡೆಯಬಹುದು. ಬಸ್ಸು ಸರ್ವಿಸುಗಳ ಲೈಕ್ಗಳನ್ನು ಹರಾಜುಮಾಡುವುದರಿಂದ ಬಹಳ ಹಣ ಪಡೆಯಬಹುದು. ಹೀಗೆಯೇ ಇನ್ನೂ ಅನೇಕ ಬಾಬುಗಳಿಂದ ಸರ್ಕಾರದ ವರಮಾನ ಹೆಚ್ಚಿಸಲು ಮಾರ್ಗಗಳಿವೆಯೆಂದು ನನ್ನ ಅಭಿಪ್ರಾಯ.

ಕೃಷ್ಣರಾಜಸಾಗರದಲ್ಲಿ ನೀರು ಬತ್ತಿಹೋದ ವಿಚಾರದಲ್ಲಿ ಜನಾಬ್ ಇಮಾಂರವರು "A certain thing has happened with which the present administration will always be associated" ಎಂದು ಹೇಳಿದರು. I fail to understand how a man of his political standing can associate these things with the Administration. Certain things have happened in Assam and therefore are they to be associated with the Administration in Assam!

A. VOICE.—Shivasamudram incident happened during his regime!

Janab J. MAHOMED IMAM.—I set it right within two months.

Sri A. BHEEMAPPA NAIK.—Shivasamudram breakdown is ascribed to his Ministry.

Sri T. MARIAPPA (Home Minister).—Krishnarajasagara filled up in seven days!

ಶ್ರೀ ಕಡಿದಾಳ್ ಮಂಜಪ್ಪನವರು.—ಶ್ರೀಮಾನ್ ಚೆನ್ನಬೈರೇಗೌಡರು ಸಮಗ್ರ ಸೇವಾ ಸಂಘಗಳು ಸಮರ್ಪಕವಾಗಿ ಕೆಲಸಮಾಡಲಿಲ್ಲವೆಂದೂ ಗ್ರಾಮಾಭಿವೃದ್ಧಿ ಸಮಿತಿಗಳು ಸಮರ್ಪಕವಾಗಿ ನಡೆಸುವುದಿಲ್ಲವೆಂದೂ ಅಪ್ಪಣೆ ಕೊಡಿಸಿದರು. ಸಂಸ್ಥೆಗಳು ಸರಿಯಾಗಿ ನಡೆಯುವುದು ಅಥವಾ ನಡೆಯದಿರುವುದು ಅದನ್ನು ನಡೆಸುವ ವ್ಯಕ್ತಿಗಳನ್ನವಲಂಬಿಸಿರುತ್ತದೆ. ಎಲ್ಲಯವರೆಗೆ ಅವುಗಳನ್ನು ನಡೆಸುವ ವ್ಯಕ್ತಿಗಳು ಪ್ರಾಮಾಣೀಕರಾಗಿಯೂ ಉತ್ಸಾಹಶಾಲಿಗಳಾಗಿಯೂ ಇರುತ್ತಾರೋ ಅಲ್ಲಿಯವರೆಗೆ ಕೆಲಸ ಸರಿಯಾಗಿ ನಡೆಯುತ್ತದೆ. ಗ್ರಾಮಾಭಿವೃದ್ಧಿಯ ವಿಚಾರವಾಗಿ ಹೇಳುವುದಾದರೆ ಆ ಯೋಜನೆ ಬಹಳ ಚೆನ್ನಾಗಿದೆ. ಅದು ಫಲದಾಯಕವಾಗದಿದ್ದರೆ ಅದಕ್ಕೆ ಹಣದ ಲಭಾವ ಅಥವಾ ಅಲ್ಲಿ ಕೆಲಸ ಮಾಡುತವರಲ್ಲಿ ದಕ್ಷತೆ ಇಲ್ಲದಿರುವುದು ಅಥವಾ ಪ್ರಾಮಾಣಿಕರಾದ ಕೆಲಸಗಾರರ ಕೊರತೆ—ಇವು ಕಾರಣವಾಗಿರಬಹುದೇ

ವಿನಾ ಇತರ ಕಾರಣಗಳಿಂದ ಈ ಯೋಜನೆ ಎಂದಿಗೂ ನಿಷ್ಫಲವಾಗಲಾರದೆಂದು ನನ್ನ ಅಭಿಪ್ರಾಯ. ಇಷ್ಟು ಹೇಳಿ ನಾನು ರಾಜಪ್ರಮುಖರ ಭಾಷಣವನ್ನು ಸ್ವಾಗತಿಸುತ್ತೇನೆ.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಮ ಪಂಗಡ).—ಸ್ಪೀಪ್ಕರ್, ಶ್ರೀಮನ್ಮಹಾರಾಜರವರ ಭಾಷಣದ ವಿಚಾರದಲ್ಲಿ ನಾನು ಪ್ರಸ್ತಾಪಿಸುತ್ತಾ ಶ್ರೀಮನ್ಮಹಾರಾಜರವರಿಗೆ ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಬೇಕಾಗಿದೆ. ಅವರ ಭಾಷಣದಲ್ಲಿ ಕೊರಿಯಾ ಯುದ್ಧ ಮತ್ತು ಕಾಶ್ಮೀರ ಸಮಸ್ಯೆಯ ವಿಚಾರವನ್ನೂ ಹೇಳಿದ್ದಾರೆ. ಆ ವಿಚಾರದಲ್ಲಿ ನಾನು ಹೆಚ್ಚಾಗಿ ಪ್ರಸ್ತಾಪಿಸದೆ ಕೊರಿಯಾ ಯುದ್ಧ ಜಾಗ್ರತೆ ನಿಂತು, ಕಾಶ್ಮೀರ ಸಮಸ್ಯೆ ಎಲ್ಲರಿಗೂ ಸಮರ್ಪಕವಾಗಿ ಒಪ್ಪುವ ರೀತಿಯಲ್ಲಿ ಪರಿಹಾರವಾಗಲೆಂದು ಭಗವಂತನನ್ನು ಪ್ರಾರ್ಥಿಸುತ್ತೇನೆ.

ಇನ್ನು ಚುನಾವಣೆ ಸ್ಥಾನಗಳ ಸೀಮಾ ವ್ಯಾಪ್ತಿ ನಿರ್ಧಾರದ ವಿಚಾರ ಪ್ರಸ್ತಾಪಿಸಿದ್ದಾರೆ. ಆ ವಿಚಾರದಲ್ಲಿ ಈಗ ನಾನು ಹೆಚ್ಚು ಕಾಲ ತೆಗೆದುಕೊಳ್ಳದೆ ಸೂಕ್ಷ್ಮವಾಗಿ ಹೇಳುತ್ತೇನೆ. ಇದು ಬಹಳ ಮುಖ್ಯವಾದ ವಿಷಯವಾದ್ದರಿಂದ ಇಂಡಿಯಾ ಸರ್ಕಾರದವರು ಮೈಸೂರು ಸರ್ಕಾರದವರ ಸಲಹೆಯನ್ನು ಕೇಳಿರುತ್ತಾರೆ. ಆ ಸಂಬಂಧವಾಗಿ ಸಲಹೆಗಳನ್ನು ಪ್ರಾಯಶಃ ಇಂಡಿಯನ್ ಪಾರ್ಲಮೆಂಟಿನಲ್ಲಿ ಯಾವ ಬದಲಾವಣೆಯೂ ಇಲ್ಲದೆ ಮೆಚ್ಚಿ ಒಪ್ಪಿಕೊಳ್ಳುವ ಹಾಗೆ ಕಳುಹಿಸಬೇಕಾಗಿದೆ. ಇಷ್ಟು ಮಾತ್ರ ಹೇಳಿ ಅದಕ್ಕೆ ನಾವೆಲ್ಲರೂ ಸಹ ಪ್ರಯತ್ನಪಟ್ಟು ನಮ್ಮ ದೇಶಕ್ಕೂ ಮತ್ತು ಇತರ ಸಂಸ್ಥಾನಗಳಿಗೂ ಸರಿಯಾದ ಒಂದು ಯೋಜನೆಯನ್ನು ತಯಾರುಮಾಡಿ ಕಳುಹಿಸುವುದಕ್ಕೆ ಶ್ರಮಿಸಿ ಸಲಹೆ ಕೊಡಬೇಕೆಂದು ಪ್ರಾರ್ಥಿಸುತ್ತೇನೆ.

ಇನ್ನು ಕಾಲಸ್ಥಿತಿಯ ವಿಚಾರ. ಶ್ರೀಮನ್ಮಹಾರಾಜರವರು ಹೇಳಿರುವ ರೀತಿಯಲ್ಲಿ ಕಳೆದ ನುಮಾರು 15-20 ದಿನಗಳಿಂದ ಮಳೆಯಾಗಿ ದೇಶದ ಅನೇಕ ಕಡೆಗಳಲ್ಲಿ ಜನರಿಗೆ ತೃಪ್ತಿಯನ್ನುಂಟುಮಾಡಿರುವುದು ಸಂತೋಷಕರವಾಗಿದೆ. ಈ ಮುಂದೆ ಇನ್ನೂ ಉತ್ತಮವಾಗುವುದರಲ್ಲಿ ಸಂಶಯವಿಲ್ಲವೆಂದು ಹೇಳಬಹುದು. ಆದರೆ ಕೆಲವು ಭಾಗಗಳಲ್ಲಿ ಮಳೆಯಾಗಿದ್ದರೂ ಹೆಚ್ಚು ಪ್ರಯೋಜನವಿಲ್ಲದೆ ಅನಾನುಕೂಲವಾಗಿದೆ ಎಂಬುದನ್ನು ಸರ್ಕಾರದವರು ಗಮನಿಸಬೇಕಾಗುತ್ತದೆ. ಮೈಸೂರು ಜಿಲ್ಲೆ ತೆಗೆದುಕೊಂಡರೆ ನಂಜನಗೂಡು ಸಬ್ ಡಿವಿಜನ್‌ನಲ್ಲಿ ಸದ್ಯಕ್ಕೆ ಮಳೆಯಾಗಿದ್ದರೂ ಸಹ ಪ್ರಕೃತ ಕೊಯ್ಲಿಗೆ ಬರಬೇಕಾಗಿದ್ದ ಅಂತಹ ಬೇಸಿಗೆಯಲ್ಲಿ ಮಳೆಯಾಗಿದ್ದು ಈಗ ಕೊಯ್ಲಿಗೆ ಬರಬೇಕಾಗಿದ್ದು ಜೋಳದ ಫಸಲಲ್ಲದೆ, ಅನಾನುಕೂಲವಾಗಿ, ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿರುವ ಹಾಗೆ ಅಲ್ಲಿ ಆಹಾರ ಸಮಸ್ಯೆಯು ಇನ್ನೂ ಕಷ್ಟಕರವಾಗಿ ಗಾಬರಿಯನ್ನುಂಟುಮಾಡಿರುತ್ತೆ. ಪ್ರಾಯಶಃ ಆಹಾರಭಾವ ಪರಿಸ್ಥಿತಿ ಮುಂದಿನ ಸುಗ್ಗಿ ಕಾಲ ಬರುವವರೆಗೂ ಸಹ ಇದೇ ರೀತಿ ಇರುತ್ತದೆ. ಇದನ್ನು ಪರಿಹಾರಮಾಡುವುದಕ್ಕೆ ನಮ್ಮ ಸರ್ಕಾರದವರು ಸರ್ವ ಪ್ರಯತ್ನವನ್ನೂ ಮಾಡುತ್ತಾರೆಂಬ ಭರವಸೆ ನನಗಿದೆ. ಅಂಥ ಕಡೆಗಳಲ್ಲಿ ಸಾಕಾದಷ್ಟು ಧಾನ್ಯ ಒದಗಿಸುತ್ತಾ ಇದ್ದೀರಿ. ಆದರೆ ಅದು ಇನ್ನೂ ಸಾಲದು. ಕಳೆದ ತಿಂಗಳು ಮೈಸೂರು ಜಿಲ್ಲೆಯ ಆ ಸಬ್‌ಡಿವಿಜನ್‌ಗೆ ಕೊಡತಕ್ಕ ಕೋಟಾ ಕಡಿಮೆ ಮಾಡಿದ್ದಾರೆಂದು ಕೇಳಿದೆ. ಚಾಮರಾಜನಗರ ಮತ್ತು ಗುಂಡ್ಲುಪೇಟೆಗೆ ಕಡಿಮೆಯಾಗಿದೆ ಎಂಬ ವರ್ತಮಾನ ಬಂದಿದೆ. ಇದು ನಿಜವೋ ಇಲ್ಲವೋ ನನಗೆ ತಿಳಿಯದು.

ಶ್ರೀ ಟಿ. ಮರಿಯಪ್ಪನವರು.—ಇಲ್ಲ. ಕೋಟಾ ಜಾಸ್ತಿ ಮಾಡುತ್ತಾ ಇದ್ದೇವೆ.

ಶ್ರೀ ಎಂ. ಮಾದಯ್ಯನವರು.—ನನಗೆ ತಿಳಿದುಬಂದ ವರ್ತಮಾನ ಹೇಳಿದೆ. ಇರಬಹುದು; ಹಾಗಿದ್ದರೆ ಅಭಿನಂದಿಸುತ್ತೇನೆ. ಅದೂ ಸಾಲುವುದಿಲ್ಲ. ತಾವು ಇನ್ನೊಂದು ಸಾರಿ ಬೆಳೆ ಅಂದರೆ ಮುಂದಿನ ವರ್ಷ ಜೋಳದ ಬೆಳೆ ಬಂದು ಉತ್ತಮಸ್ಥಿತಿಗೆ ಬರುವವರೆಗೂ ಸಹ ಸರಿಯಾದ ಸಹಾಯ ನೀಡಬೇಕೆಂದು ಒತ್ತಾಯ ಪಡಿಸುತ್ತೇನೆ.

ನಮ್ಮ ಮಾನ್ಯ ಮಿತ್ರರಾದ ಶ್ರೀ ಚೆನ್ನಬಸಪ್ಪನವರು ಎಷ್ಟೇ ಆವೇಶದಿಂದ ಹೇಳಿದರೂ ಸಹ ಅದನ್ನು ಸರಿಯಾದ ರೀತಿಯಲ್ಲಿ ಹೇಳಿದರು. ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅದನ್ನು ಸುಧಾರಿಸಬೇಕಾದ್ದು ಬಹಳ ಮುಖ್ಯವಾಗಿದೆ. ಪ್ರಥಮತಃ ಈ ಜಿಲ್ಲೆಯ ಕೆಲವು ತಾಲ್ಲೂಕುಗಳು ಮತ್ತು ಚಿತ್ರದುರ್ಗ ಮತ್ತು ಕೋಲಾರ ಜಿಲ್ಲೆಗಳ ಕೆಲವು ತಾಲ್ಲೂಕುಗಳು, ಈ ಮೂರು ಕಡೆ ಈ ಪರಿಸ್ಥಿತಿ ಇದೆಯೆಂದು ವರ್ತಮಾನ ಕೇಳಿ ಬಂತು. ಆದರೂ ಈ ಕಷ್ಟ ಪರಿಸ್ಥಿತಿ ಉತ್ತಮವಾಗುತ್ತದೆ. ಅಂಥಾ ಕಷ್ಟಪರಿಸ್ಥಿತಿಯೇನೂ ಇಲ್ಲವೆಂದು ನನಗೆ ಕಾಣುತ್ತದೆ.

ಇನ್ನು ಹೆಚ್ಚು ಆಹಾರ ಬೆಳೆ ಬೆಳೆಯುವ ವಿಚಾರದಲ್ಲಿ ಪ್ರಸ್ತಾಪಿಸಬೇಕಾಗುತ್ತದೆ. ನೆನ್ನೆ ದಿನ ಮಾನ್ಯ ಸದಸ್ಯರಾದ ಶ್ರೀ ಚೆನ್ನಬಸಪ್ಪನವರು ಹೇಳುತ್ತಾ ಇದ್ದಹಾಗೆ ಮತ್ತು ಇನ್ನೂ ಅನೇಕ ಸದಸ್ಯರು ಹೇಳಿದ ಹಾಗೆ ನಮ್ಮ ಮಾನ್ಯ ಮಂತ್ರಿಗಳಾದ ಗೃಹನಚಿವರು ಬಹಳ ಉತ್ಸಾಹದಿಂದಲೂ, ನಿರ್ವಂಚನೆಯಿಂದಲೂ ಈ ವಿಷಯದಲ್ಲಿ ಸರ್ವಪ್ರಯತ್ನಗಳನ್ನು ಮಾಡುತ್ತಾ ಇದ್ದಾರೆ. ಆದರೆ ಎಲ್ಲ ರೋಪವಿದೆಯೋ ಅದನ್ನು ಸರಿಪಡಿಸಬೇಕೆಂದು ಹೇಳುತ್ತಾ ಇದ್ದೇನೆ. ಅಂಥ ರೋಪಗಳನ್ನು ಹೇಳುವುದಾದರೆ ನನಗೆ ಕಾಣುವುದು ಒಂದು ಇದೆ. ಯಾರು ನಿಜವಾಗಿ ಜಮೀನನ್ನು ವ್ಯವಸಾಯ ಮಾಡುತ್ತಾರೋ, ಯಾರು ಜಮೀನು ಇಲ್ಲದೆ ಇತರರ ಜಮೀನುಗಳಲ್ಲಿ ಕೂಲ, ವಾರ ಮಾಡಿಕೊಂಡು ಇದ್ದಾರೋ, ಅವರು ಯಾವ ಕೋಮಿಗೇ ಸೇರಿರಲಿ ಅಂಥವರಿಗೆ ಜಮೀನು ಕೊಟ್ಟು ಜಮೀನು ನನ್ನದು, ನಾನು ಚೆನ್ನಾಗಿ ಬೆಳೆಯಬೇಕು ಎಂಬ ಉತ್ಸಾಹ, ಹುರುಪು ಬರುವಂತೆ ಮಾಡಿ ವ್ಯವಸಾಯ ಮಾಡುವುದಕ್ಕೆ ಸಹಾಯ ಮಾಡಿದರೆ ನಮ್ಮ ದೇಶ ಸ್ವಯಂಪರಿಪೂರ್ಣವಾಗಬಹುದೆಂದು ನನಗೆ ಅನ್ನಿಸುತ್ತದೆ. ಸರ್ಕಾರದವರು ಹೆಚ್ಚು ಆಹಾರ ಬೆಳೆಯುವ ಯೋಜನೆಗಾಗಿ ಘನೋದ್ದೇಶದಿಂದ ಕೊಟ್ಟಂಥ ಜಮೀನುಗಳನ್ನು ಗ್ರಾಮಾಂತರಗಳಲ್ಲಿ ಸ್ಥಳೀಯ ಅಧಿಕಾರಿಗಳು ವಾಪಸು ತೆಗೆದುಕೊಳ್ಳುತ್ತಿದ್ದಾರೆ. ಆ ರೀತಿ ಮಾಡದೆ ಕೊಡುವಾಗಲೇ ಸರಿಯಾದ ರೀತಿಯಲ್ಲಿ ಕೊಟ್ಟು, ಅದರಲ್ಲೂ ಧಾರಾಳವಾದ ನೀತಿಯನ್ನು ಅನುಸರಿಸಿ ರೈತರಿಗೆ ಪ್ರೋತ್ಸಾಹ ಕೊಡಬೇಕು. ಹಾಗೆ ಜಮೀನುಗಳನ್ನು ಕೊಟ್ಟು ಸಾಕಾದಷ್ಟು ಸಹಾಯ ನೀಡಬೇಕೆಂದು ಈ ಸಮಯದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ.

ಇನ್ನು ನಬ್ಬಡಿ ಮೊಬಲಗು ಮತ್ತು ಆಹಾರ ಧಾನ್ಯಗಳ ಮಾರಾಟದ ಬೆಲೆಯ ವಿಚಾರ. 1942 ರಿಂದಲೂ ಸಹ ನಾನು ಆಹಾರ ಧಾನ್ಯಗಳ ಮಾರಾಟದ ಬೆಲೆಯ ವಿಚಾರ ಬಂದಾಗ ಬೆಲೆ ಹೆಚ್ಚಿಸಿಕೊಡಬೇಕೆಂದು ವಾದ ಮಾಡುತ್ತಾ ಇದ್ದೇನೆ. ಕಾರಣವೇನೆಂದರೆ ಇನ್ನು ಅನ್ಯಾಯವಾಗಿ ಹೆಚ್ಚಿಗೆ ಬೆಲೆಗೆ ಧಾನ್ಯಗಳನ್ನು ಮಾರಾಟಮಾಡುವುದಕ್ಕಾಗುವುದಿಲ್ಲ. ನೀವು ಕೋಟಾ ತರಿಸಿ ಮಾರಾಟ ಮಾಡುವಾಗ ಜಾಸ್ತಿ ಮಾಡಬೇಡಿ ಎಂದು

ಹೇಳುತ್ತಿದ್ದೆ. ಈಗ ನನಗೆ ಅನ್ನಿಸುತ್ತದೆ, ಧಾನ್ಯ ಗಳನ್ನು ಬೆಳೆಯುವ ರೈತರಿಗೆ ಹೆಚ್ಚಿಗೆ ಕೊಡುವ ವಿಚಾ ರದಲ್ಲಿ ನಾವೇನೂ ವ್ಯಥೆಪಡಬೇಕಾಗಿಲ್ಲ. (Hear, Hear) ಏಕೆಂದರೆ ರೈತನಿಗೆ ಹೆಚ್ಚು ಬೆಲೆ ಕೊಡುವುದ ರಿಂದ, ಅವನಿಗೆ ಉತ್ಪಾಹವುಂಟಾಗಿ ಹೆಚ್ಚು ಧಾನ್ಯ ಕೊಡುತ್ತಾನೆ. ಸಾಮಾನ್ಯ ಜನಗಳ ಉಪಯೋಗ ಕ್ಕಾಗಿ ಆಹಾರ ಪದಾರ್ಥ ಸಿಕ್ಕುತ್ತದೆ. ಆ ದೃಷ್ಟಿಯಿಂದ ಬೆಲೆ ಹೆಚ್ಚಿಸಿರುವುದು ಸೂಕ್ತವಾಗಿದೆಯೆಂದು ನನ್ನ ಅಭಿಪ್ರಾಯವನ್ನು ಕೊಡಬೇಕಾಗುತ್ತದೆ.

ಇನ್ನು ಅಖಿಲ ಭಾರತದ ಅಡ್ಮಿನಿಸ್ಟ್ರೇಟಿವ್ ಸರ್ವಿಸನ್ನು ಮೈಸೂರಿಗೆ ಅನ್ವಯಿಸುವ ವಿಚಾರ ಮಾತ ನಾಡುವುದಾದರೆ ಈಗಾಗಲೇ ನನ್ನ ಮಿತ್ರರನೇಕರು ಯಾರಿಗೂ ತೊಂದರೆಯಾಗಬಾರದೆಂಬ ಒಳ್ಳೆಯ ಉದ್ದೇಶ ದಿಂದ, ತಮ್ಮ ತಮ್ಮ ನಲಹೆಗಳನ್ನು ನೀಡಿದ್ದಾರೆಂದು ಹೇಳುತ್ತೇನೆ. ನಮ್ಮ ಸರ್ಕಾರದವರೂ ಸಹ ಅದೇ ರೀತಿ ಹೇಳಿದ್ದಾರೆ. They have accepted in principle the scheme of extension of the Indian Administrative and Indian Police Services to the State. ಆ ತತ್ವವನ್ನು ನಾವು ಒಪ್ಪಿಕೊಂಡಿದ್ದೇವೆ. ನಾವು ಇಂಡಿಯಾ ದೇಶದ ಒಂದು ಅಂಗವಾಗಿದ್ದೇವೆ. ಆದ್ದರಿಂದ ಅದನ್ನು ಒಪ್ಪಿ ಕೊಂಡು ಜಾರಿಗೆ ತರುವಾಗ ಯಾರಿಗೂ ಸಹ ತೊಂದರೆ ಯಾಗದಂತೆ ನೋಡಿಕೊಳ್ಳಬೇಕೆಂದು ಹೇಳುವುದರಲ್ಲಿ ಯಾರದೂ ಭಿನ್ನಾಭಿಪ್ರಾಯವಿಲ್ಲ. ಎಲ್ಲರೂ ಬೆಂಬಲ ನೀಡಿದ್ದಾರೆಂಬ ಮಾತನ್ನು ಹೇಳುತ್ತೇನೆ. ತತ್ಪಾಪಿ ನಿಮ್ಮ ತರಗತಿಯ ಮತ್ತು ಇತರ ಹಿಂದುಳಿದ ವರ್ಗಗಳ ಅಧಿಕಾರಿಗಳಿಗೆ ಸ್ಕ್ರೀನಿಂಗ್ ಪರೀಕ್ಷೆಯಿಂದ ತೊಂದರೆ ಯಾಗಬಹುದು. ಈ ವರ್ಗಕ್ಕೆ ಸೇರಿದ ಅಧಿಕಾರಿಗಳಿಗೂ ಮತ್ತು ಇತರ ಅಧಿಕಾರಿಗಳಿಗೂ ಸಾಕಾದಷ್ಟು ರಕ್ಷಣೆ ಕೊಡಬೇಕೆಂದು ವಿನಂತಿ.

ಕೊನೆಯದಾಗಿ ಗ್ರಾಮಾಭಿವೃದ್ಧಿಯ ವಿಚಾರ. ಈಗಾಗಲೇ ಬಹಳ ವರ್ಷಗಳಿಂದ ಸರ್ಕಾರದವರು ಇದರ ಪ್ರಯತ್ನದಲ್ಲಿದ್ದಾರೆಂದು ಹೇಳಿದರೆ ತಪ್ಪಾಗ ಲಾರದು. ಒಂದು ಒಳ್ಳೆಯ ಉದ್ದೇಶವನ್ನಿಟ್ಟುಕೊಂಡು ಮಾನ್ಯ ಸದಸ್ಯರಾದ ಶ್ರೀ ಗುಂಡಪ್ಪಗೌಡರು ಮಂತ್ರಿ ವರ್ಗದಲ್ಲಿದ್ದ ಕಾಲದಿಂದಲೂ ಇದು ನಡೆದುಕೊಂಡು ಬರುತ್ತಿದೆ. ಈಗ ವಿಲೀನೀಕರಣದ ಕಮಿಟಿಯ ವರದಿ ಯಲ್ಲಿ ಹೇಳಿರುವ ಪ್ರಕಾರ ಕೂಡಲೆ ಸರ್ಕಾರದವರು ಈ ಬಗ್ಗೆ ಒಂದು ಮನುಬೆಯನ್ನು ತಂದು ಅವರ ಕಾರ್ಯಕ್ಷೇತ್ರ ಹೀಗೆಯೇ ಇದೆಯೆಂದು ಹೇಳಿ ಗೊತ್ತು ಮಾಡಿದ ಹೊರತು ನಮ್ಮ ದೇಶದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳು ಸಮರ್ಪಕವಾಗಿ ನಡೆಯುವುದಕ್ಕೆ ಕೆಲವು ಆತಂಕಗಳಿವೆ. ಈ ಬಗ್ಗೆ ಆದಷ್ಟು ಬೇಗ ಕಾರ್ಯಕ್ರಮ ಕೈಕೊಳ್ಳಬೇಕೆಂದು ಹೇಳುತ್ತೇನೆ. ಸಾರ್ವಜನಿಕರ ಸಹಕಾರವೂ ಅಗತ್ಯವೆಂಬುದರಲ್ಲಿ ಸಂಶ ಯವಿಲ್ಲ. ಅದಿಲ್ಲದಿದ್ದರೆ 1926 ನೆಯ ಇಸವಿಯಿಂದ ಇದುವರೆಗೂ ಗ್ರಾಮ ಪಂಚಾಯ್ತಿ ಆಕ್ಟು ಯಾವ ರೀತಿ ಒಂದು ಪುಸ್ತಕದ ಬದನೆ ಕಾಯಾಗಿ ಉಳಿದಿದೆಯೋ ಇದೂ ಹಾಗೆಯೇ ಉಳಿದಿರುತ್ತದೆ. ಇಷ್ಟು ಹೇಳಿ ನಮ್ಮನ್ನಾಳುವ ಮಹಾಸ್ವಾಮಿಯವರಿಗೆ ಅಭಿನಂದನೆ ಗಳನ್ನು ಸಲ್ಲಿಸಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡರು (ತುಮಕೂರು ಜಿಲ್ಲೆ).—ಅಧ್ಯ ಕ್ಷರೇ, ಸಭೆಯ ಮುಂದೆ ಮಂಡಿಸಿರುವ ತಿದ್ದುಪಡಿ ನೂಚ ನೆಯನ್ನು ಅನುಮೋದಿಸುತ್ತೇನೆ. ನನ್ನ ಭಾಷಣವನ್ನು ಪ್ರಾರಂಭಿಸುವುದಕ್ಕೆ ಮೊದಲು ನಿನ್ನೆ ನಡೆದ ಚುನಾವಣೆಯಲ್ಲಿ ಚುನಾಯಿತರಾಗಿ ಬಂದು ನಿನ್ನೆ ತಾನೆ ಮಾತ ನಾಡಿದ ಶ್ರೀ ಚೆನ್ನಬೈರೇಗೌಡರಿಗೆ ನನ್ನ ಸ್ವಾಗತ ವನ್ನು ಸೂಚಿಸ ಬಯಸುತ್ತೇನೆ. (ಸಭೆಯಲ್ಲಿ ನಗು!) ಯಾವಾಗಲೂ ಇದೊಂದು ಸಂಪ್ರದಾಯ. ಚುನಾಯಿತ ರಾಗಿ ಬಂದ ಸದಸ್ಯರು ಮೊಟ್ಟ ಮೊದಲನೆಯ ಸಾರಿ ಮಾತನಾಡಿದ ತರುವಾಯ ಮಾತನಾಡುವ ಸದಸ್ಯರು ಅವರಿಗೆ ಸ್ವಾಗತವನ್ನು ಸೂಚಿಸುವುದು ವಾಡಿಕೆ. ಅವ ರಂತೆಯೇ ಇನ್ನೂ ಯಾರಾದರೂ ಈ ಸಭೆಗೆ ಚುನಾಯಿತ ರಾಗಿ ಬಂದವರು ಮಾತನಾಡಿದ್ದಾರೆ ಅವರನ್ನು ನಾನು ಸ್ವಾಗತಿಸುತ್ತಿದ್ದೆ. ಅದು ನನ್ನ ಕರ್ತವ್ಯ. ಈಗ ಹೊಸದಾಗಿ ಚುನಾಯಿತರಾಗಿ ಬಂದಿರುವವರ ಪೈಕಿ ಇಪರೊಬ್ಬರೇ ಮಾತನಾಡಿರುವವರು. ಆದ್ದರಿಂದ ಅವರನ್ನು ಸ್ವಾಗತಿಸುತ್ತೇನೆ.

ಒಬ್ಬ ಸದಸ್ಯರು :—ಶ್ರೀ ಎ. ಎಸ್. ನಾರಾಯಣ ರಾಯರೂ ಮಾತನಾಡಿದ್ದಾರೆ.

ಶ್ರೀ ಎ. ಎಸ್. ನಾರಾಯಣರಾಯರು.—ತಾವು ಸ್ವಾಗತಿಸದೆ ಇದ್ದರೂ ನಾನೇನೋ ಚುನಾಯಿತನಾಗಿ ಬಂದಿದ್ದೇನೆ.

ಶ್ರೀ ಬಿ. ಹುಚ್ಚೇಗೌಡರು.—ಅದು ನನಗೆ ಗೊತ್ತಿಲ್ಲ. ಗೊತ್ತಿದ್ದರೆ ಅದನ್ನೂ ಹೇಳುತ್ತಿದ್ದೆ.

ನನ್ನ ಮಾನ್ಯ ಮಿತ್ರರಾದ ಶ್ರೀ ಚನ್ನಬೈರೇ ಗೌಡರು ಮಾಡಿದ ಭಾಷಣದಲ್ಲಿ ಗ್ರಾಮಾಂತರ ಪ್ರದೇಶ ಗಳಲ್ಲಿರುವ ಸಾಮಾನ್ಯ ಜನರಿಗೆ ಏನೇನು ಕುಂದುಕೊರತೆ ಗಳಿವೆಯೆಂಬುದನ್ನು ಸಭೆಯವರ ಅವಗಾಹನೆಗೆ ತಂದಿ ದ್ದಾರೆ. ಇನ್ನು ಮುಂದೆಯೂ ಅವರು ಸಭೆಯ ಕಾರ್ಯಕಲಾಪಗಳಲ್ಲಿ ಹೆಚ್ಚು ಹೆಚ್ಚಾಗಿ ಭಾಗವಹಿಸಿ ಸಹಾಯ ಮಾಡುತ್ತಾರೆಂಬ ಭರವಸೆಯಿದೆ.

ಇನ್ನು ಶ್ರೀ ಸುಬ್ರಹ್ಮಣ್ಯರವರು ತಮ್ಮ ನಿರ್ಣಯ ವನ್ನು ಸಭೆಯ ಮುಂದಿಡುತ್ತಾ ಮೊದಲನೆಯದಾಗಿ ವಿದೇಶಾಂಗ ನೀತಿಯ ವಿಚಾರದಲ್ಲಿ ಹೇಳಿದ ದರ ಸಂಬಂಧದಲ್ಲಿ ಒಂದೆರಡು ಮಾತು. ಅವರೇನೋ, ಏನಾದರೂ ಭಿನ್ನಾಭಿಪ್ರಾಯವಿದ್ದರೆ ಒಂದು ತಿದ್ದುಪಡಿ ಯನ್ನು ಸೂಚಿಸಿದ್ದರೂ, ಅದರೆ ಯಾರೂ ಸೂಚಿಸಿಲ್ಲ ಎಂದು ಹೇಳಿದರೂ ನಾನು ಆ ರೀತಿಯಾಗಿ ಒಂದು ತಿದ್ದುಪಡಿಯನ್ನು ಸೂಚಿಸಿ ಈ ಸಭೆಯ ಅನಮಾಧಾನ ವನ್ನು ವ್ಯಕ್ತಪಡಿಸುವುದು ಸರಿಯಲ್ಲವೆಂದು ಭಾವಿಸಿದೆ. ಆದರೂ ಈ ವಿಷಯದಲ್ಲಿ ನನ್ನ ಸಂಶಯವನ್ನು ತಿಳಿಯ ಪಡಿಸಲಿಚ್ಛಿಸುತ್ತೇನೆ. ಅದೇನೆಂದರೆ, ಈಗ ನಮ್ಮ ದೇಶಕ್ಕೆ ಪೂರ್ವ ಪಶ್ಚಿಮ ಎರಡು ಕಡೆಯಲ್ಲೂ ಬೆಂಕಿಯ ಜ್ವಾಲೆ ಹತ್ತಿ ಉರಿಯುತ್ತಿದೆ. ದೊಡ್ಡ ದೊಡ್ಡ ರಾಷ್ಟ್ರ ಗಳಗೇ ಘರ್ಷಣೆ ಬಿದ್ದಿದೆ. ಇವುಗಳ ಮಧ್ಯೆ ನಾವು ತಾಟಸ್ಥ್ಯ ವಹಿಸಿ ನಿಂತಿದ್ದೇವೆ. ಅದಕ್ಕನುಸಾರವಾಗಿ ನಮ್ಮ ಪ್ರಧಾನ ಮಂತ್ರಿಗಳು ಯುಕ್ತ ಕಾರ್ಯಕಲಾಪ ಗಳನ್ನೇನೋ ತೆಗೆದುಕೊಂಡಿದ್ದಾರೆ. ಆದರೂ, ಇದನ್ನು ತೆಗೆದುಕೊಳ್ಳುವುದಕ್ಕೆ ಮುಂಚೆ ಕೊರಿಯಾ ವಿಷಯದಲ್ಲಿ ಅವರೊಂದು ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ಯುದ್ಧ ಸಂಬಂಧದಲ್ಲಿ ಧಾಳಿಕಾರನು (aggressor) ಯಾರೆಂಬುದನ್ನು ಹೇಳದೆ ಇದ್ದಿದ್ದರೆ ಅವರಿಗೆ ಮತ್ತಷ್ಟು ಬೆಂಬಲ ಬರುತ್ತಿತ್ತು. ಯಾವ ವಿಷಯದಲ್ಲೂ ಅಕ್ಷೇಪಣೆ ಬರುವುದಕ್ಕೆ ಅವಕಾಶವೇ ಇರುತ್ತಿರಲಿಲ್ಲ.

ಒಬ್ಬ ಸದಸ್ಯರು.—ಇರುವ ವಿಷಯವನ್ನು ಹೇಳ ಬೇಡವೇ ?

ಶ್ರೀ ಬಿ. ಹುಚ್ಚೇಗೌಡರು.—ಏನೇ ಆದರೂ ಅದು ಸ್ವಲ್ಪ ಜಿಜ್ಞಾಸೆಯ ವಿಚಾರ. ಇಂಥವರೇ ಧಾಳಿಕಾ ರರು ಎಂದು ಹೇಳುವುದಕ್ಕಾಗುವುದಿಲ್ಲ.

ಎರಡನೆಯದಾಗಿ, ವಿಲೀನೀಕರಣದ ವಿಚಾರ. ಮೊದಲನಿಂದಲೂ ಸಹ ಹಿಂದೆ ರಾಜ್ಯಾಂಗ ರಚನಾ

ಸಭೆಯಲ್ಲೂ ಕೂಡ ನಾನು ಇದನ್ನೇ ಹೇಳುತ್ತಾ ಬಂದಿದ್ದೇನೆ. ಮೈಸೂರು ದೇಶದ ವ್ಯಕ್ತಿತ್ವ ವೈಶಿಷ್ಟ್ಯಗಳನ್ನು ಉಳಿಸಿಕೊಂಡು ಬರುವ ರೀತಿಯಲ್ಲಿ ನಾವು ಯಾವ ವ್ಯವಸ್ಥೆಯನ್ನು ಮಾಡಬೇಕು ಎಂದು. ಆದರೆ ನಾವು ನೋಡುತ್ತಿರುವುದರಲ್ಲಿ ಪ್ರತಿಯೊಂದು ಸಲವೂ ನಮ್ಮ ಸರ್ಕಾರದವರು ಈ ವಿಚಾರದಲ್ಲಿ ತಪ್ಪು ಮಾಡುತ್ತಲೇ ಬಂದಿದ್ದಾರೆ. ಅದರಲ್ಲೂ ಅನೇಕ ತಪ್ಪುಗಳನ್ನು ಮಾಡಿದ್ದಾರೆ. ಮೊದಲನೆಯದಾಗಿ ರಕ್ಷಣೆ, ಸಂಚಾರ ಮುಂತಾದ ವಿಷಯಗಳಲ್ಲಿ ವಿಲೀನೀಕರಣವಾಯಿತು. ಆ ಮೇಲೆ ಆರ್ಥಿಕ ವಿಲೀನೀಕರಣ; ಹೀಗೆಯೇ ಅನೇಕ ರೀತಿಯ ವಿಲೀನೀಕರಣಗಳಾಗಿ ಹೋದುವು. ಇನ್ನೂ ಹೀಗೆಯೇ ಬಾಕಿ ಏನೇನಿವೆಯೋ ಗೊತ್ತಿಲ್ಲ. ಇಷ್ಟಾದರೂ ಈ ವಿಚಾರಗಳಲ್ಲಿ ಯಾವುದರಲ್ಲೂ ಸಭೆಯ ಅನುಮತಿಯನ್ನು ತೆಗೆದುಕೊಂಡಿಲ್ಲ. ಇದೇ ಸಂಬಂಧದಲ್ಲಿ ಶ್ರೀ ಭೀಮಪ್ಪನಾಯಕರೂ ಒಂದು ವಿಚಾರವನ್ನು ಹೇಳಿದರು. "ಇದಕ್ಕೆಲ್ಲಾ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳುವ ಅವಶ್ಯಕತೆಯಿಲ್ಲ. ಅವಶ್ಯಕತೆ ಬಂದಾಗ ಆಗಾಗಲೇ ಸರ್ಕಾರದವರು ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡು ಮುಂದೆ ಸಭೆಯ ಅನುಮತಿಯನ್ನು ಪಡೆಯಬಹುದು. ಇದೇ ರೀತಿ ಇಂಡಿಯಾ ಸರ್ಕಾರದವರೂ ಮಾಡುತ್ತಿದ್ದಾರೆ" ಎಂದು ಹೇಳಿದರು. ಆದರೆ ಅವರು ಕೊಟ್ಟ ಹೋಲಿಕೆ ಸರಿಯಲ್ಲ. ಇಂಡಿಯಾ ಸರ್ಕಾರದವರು ಮಾಡುತ್ತಿರುವುದರಲ್ಲೇನೂ ಅತಿಶಯವಲ್ಲ. ಇಂಡಿಯಾ ಸರ್ಕಾರದವರು ಒಂದೇ ಪಾರ್ಟಿಯಾಗಿ ಒಮ್ಮತದಿಂದ ಸರ್ಕಾರ ನಡೆಸುತ್ತಿದ್ದಾರೆ. ಪಾರ್ಟಿ ಅಭಿಪ್ರಾಯ ತೆಗೆದುಕೊಳ್ಳಬೇಕೆಂದರೆ ಪಾರ್ಲಿಮೆಂಟಿನಲ್ಲೇ ತೆಗೆದುಕೊಳ್ಳಬೇಕಾದ ಅವಶ್ಯಕತೆಯೇನೂ ಇಲ್ಲ. ಇಲ್ಲಿ ಹಾಗಲ್ಲ 'ನಮ್ಮನ್ನೇಕೆ ನಿಮ್ಮ ಅಂತರಂಗಕ್ಕೆ ತೆಗೆದುಕೊಳ್ಳಕೂಡದೆಂದು ಅವರ (ಕಾಂಗ್ರೆಸ್ಸಿನ) ಪಾರ್ಟಿಯವರೇ ಹೇಳಿದ್ದನ್ನು ನಾವು ಕೇಳಿದ್ದೇವೆ. ಅವರನ್ನೂ ಕೇಳಿ ಮಾಡಬೇಕಾಗಿತ್ತೆಂದು ಅವರ ಕಡೆಯಲ್ಲೆ ಆಕ್ಷೇಪಣೆಗಳು ಬಂದಿವೆ.

ಶ್ರೀ ಎಂ. ಎಚ್. ಜೋಯಿಸರು.—ತಾವು ನಮ್ಮ ಸಹಾಯಕ್ಕೆ ಬಂದಿದ್ದಕ್ಕೆ ಅನಂತ ವಂದನೆಗಳು !!

ಶ್ರೀ ಬಿ. ಹುಚ್ಚೇಗೌಡರು.—ಈಗ ನೋಡಿದರೆ, ನಮ್ಮಲ್ಲಿ ಎಕ್ಸೈಸ್, ಮತ್ತು ಸೇಲ್ಸ್ ಟ್ಯಾಕ್ಸ್—ಇವೆರಡು ಇಲಾಖೆಗಳು ಮಾತ್ರ ವಿಲೀನೀಕರಣವಾಗದೆ ಉಳಿದಿವೆಯೆಂದು ಕಾಣುತ್ತದೆ. ಇವುಗಳನ್ನು ಕೇಂದ್ರ ಸರ್ಕಾರದವರಿಗೆ ವಹಿಸಿಬಿಟ್ಟು ನಮ್ಮ ಸರ್ಕಾರವನ್ನು ವಜಾಮಾಡಿಬಿಟ್ಟರೇ ಲೇಸೆಂದು ಕಾಣುತ್ತದೆ.

ಒಬ್ಬ ಸದಸ್ಯರು.—ನಿಮ್ಮ ಕಾಲದಲ್ಲಿ ಆಗಲಿ !

ಶ್ರೀ ಬಿ. ಹುಚ್ಚೇಗೌಡರು.—ಇವರೇ ಮುಗಿಸಿಬಿಡುತ್ತಾರೆಂದು ತಿಳಿದುಕೊಂಡಿದ್ದೆ. ಹೀಗೆಲ್ಲಾ ಆಗುತ್ತದೆಂದು ನಮ್ಮ ಸ್ನೇಹಿತರಿಗೆ ತಿಳಿದಿದ್ದರೆ, ಮೊದಲೇ ಮೈಸೂರು, ತಿರುವಾಂಕೂರು, ಕೊಚ್ಚಿನ್ ಎಂದು ಮುಂತಾಗಿ ಬೇರೆ ಬೇರೆಯಾಗಿರುವುದನ್ನು ಅಳಿಸಿಬಿಟ್ಟು ಎಲ್ಲವನ್ನೂ ಒಂದೇ ಮಾಡಿಬಿಟ್ಟಿದ್ದರೆ, ಅತ್ತಕಡೆ ಭಾಷಾವಾರು ಪ್ರಾಂತರಚನೆಗಳಾಗಬೇಕೆಂಬ ಪ್ರಶ್ನೆಯೂ ಸಹ ಬರುತ್ತಿರಲಿಲ್ಲ! ದಕ್ಷಿಣ ಭಾರತವೆಲ್ಲ ಒಂದೇ ಆಗಿರುತ್ತಿತ್ತು! ಈಗ ನೀವು ಮಾಡಿರುವುದು ಹೇಗಾಗಿದೆಯೆಂದರೆ, ನಾವು ನಂಬಿಕೊಟ್ಟಿದ್ದ ಅಧಿಕಾರಿಗಳೇ ನಮ್ಮ ಮಾತು ಕೇಳದಹಾಗಾಗಿದೆ. ಮಂತ್ರಿಗಳಿಗೆ ಏನು ಹೇಳಿದರೂ ಅವರು ಜವಾಬು ಕೊಡುವ ಹಾಗಿಲ್ಲ. ಉದಾಹರಣೆಗೆ ಹೇಳುವುದಾದರೆ ಚೆಲ ಫೋನ್ ಇಲಾಖೆ ನಮ್ಮಿಂದ ಕೇಂದ್ರಕ್ಕೆ ಹೊರಟು ಹೋದ ಮೇಲೆ ನಮಗೆ ಹೊಸದಾಗಿ ಒಂದು ಫೋನ್ ಬೇಕೆಂದರೂ ಸಿಕ್ಕುವುದು ಕಷ್ಟವಾಗಿದೆ. ಹೀಗೆ ನಾವು ನಂಬಿಕೆ ಕೊಡುವ ಅಧಿಕಾರಿಗಳ ಮೇಲೆ ನಮಗೇ ಅಧಿಕಾರವಿಲ್ಲವೆಂದು ಹೇಳಿದರೆ ಹೇಗೆ! ನಾಳೆ ದಿವಸ ಚುನಾವಣೆಗಳು ನಡೆಯುವ ಸಂದರ್ಭದಲ್ಲಿ ಏನಾದರೂ ಹೆಚ್ಚು ಕಡಿಮೆಯಾದರೆ ಏನು ಮಾಡುವುದು? ಆದಾಯ ತೆರಿಗೆ ವಿಚಾರದಲ್ಲಿ ವ್ಯತ್ಯಾಸ ಬಂದರೆ ಡೆಲ್ಲಿಗೆ ಹೋಗಬೇಕೇ? ಹೀಗೆ ನಮ್ಮ ವ್ಯಕ್ತಿತ್ವವನ್ನು ಕಳೆದುಕೊಂಡು ಅನಾನುಕೂಲಪಡಬೇಕಾಗಿ ಬಂದಿದೆ. ನಮಗೆ ಇನ್ನೇನೂ ಉಳಿದಿಲ್ಲ. ಕೇವಲ ಎರಡು ಇಲಾಖೆಗಳು ಮಾತ್ರ ಉಳಿದಿವೆ.

Sri G. A. ACHARYA.—Is it a correct statement that he makes that there are only two Departments in the Government in the State of Mysore?

Sri L. SIDDAPPA (Shimoga District General).—Two main Departments.

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಈ ಹೆಚ್ಚು ಆಹಾರ ಬೆಳೆಯೆಬೇಕೆಂಬ ಯೋಜನೆಯ ಬಗ್ಗೆ ವಿಶೇಷವಾಗಿ ಹಣವನ್ನು ಖರ್ಚು ಮಾಡಿದ್ದೇವೆಂದು ಹೇಳಿದ್ದಾರೆ. ಅದು ನಿಜ. ಆದರೆ ಹೆಚ್ಚಿಗೆ ಆಹಾರ ಬೆಳೆಯಲು ಇವರು ಮಾಡಿರತಕ್ಕದ್ದೇನು? ಹಣದ ಖರ್ಚು. ಆದರೆ ಸಮರ್ಪಕವಾಗಿ ಕೆಲಸವನ್ನು ಮಾತ್ರ ಮಾಡಿರುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು.—ಹಾಗಾದರೆ ಖರ್ಚನ್ನೇನೂ ಮಾಡಕೂಡದೆಂದು ತಾವು ಹೇಳುತ್ತೀರಾ?

ಶ್ರೀ ಬಿ. ಹುಚ್ಚೇಗೌಡರು.—ಇನ್ನು ಗ್ರಾಮಾಭಿವೃದ್ಧಿ ವಿಷಯವಾಗಿ ನೋಡಿದರೆ ಇವರು 150 ಟ್ರಾಕ್ಟರುಗಳನ್ನು ತರಿಸಿದ್ದಾರ್ಯೂ ಕೂಡ ಒಂದು ವರ್ಷದಲ್ಲಿ ಕೇವಲ 22,000 ಲಕ್ಷ ಎಕರೆಗಳಷ್ಟು ಪ್ರದೇಶವನ್ನು ಮಾತ್ರ ಉಳುಮೆಮಾಡಿ ಆ ಬಗ್ಗೆ 17 ಲಕ್ಷ ರೂಪಾಯಿಗಳ ಖರ್ಚನ್ನು ತೋರಿಸಿದ್ದಾರೆ. ಇದನ್ನು ಸರಾಸರಿ ಲೆಕ್ಕಹಾಕಿ ನೋಡಿದರೆ ದಿನ ಒಂದಕ್ಕೆ ಸುಮಾರು 3 ಎಕರೆಯಂತೆ 50 ದಿವಸ ಮಾತ್ರ ಉತ್ತಿರುವಂತೆ ಕಾಣುತ್ತದೆ. 150 ಟ್ರಾಕ್ಟರುಗಳ ಪೈಕಿ ಕೆಲವು ಮಾತ್ರ ಕೆಲಸ ಮಾಡಿವೆ. ಆದರೆ ಇನ್ನುಳಿದವುಗಳು ಏನು ಕೆಲಸ ಮಾಡಿರುತ್ತವೆಯೆಂಬುದೇ ತಿಳಿಯದಾಗಿದೆ.

ಇನ್ನು ಬುಲ್‌ಡೋಜರ್ಸ್‌ಗಳನ್ನು ತೆಗೆದುಕೊಂಡರೆ ಅದಕ್ಕಾಗಿ 43 ಲಕ್ಷ ರೂಪಾಯಿಗಳು ಖರ್ಚಾಗಿವೆ. ಟ್ರಾಕ್ಟರುಗಳು ಮತ್ತು ಬುಲ್‌ಡೋಜರ್‌ಗಳು ಸೇರಿ 49 ಸಾವಿರ ಎಕರೆಗಳ ಉಳಿಮೆಯಾಗಿದೆ. ಇದನ್ನೆಲ್ಲಾ ನೋಡಿದರೆ ಖರ್ಚೇನೋ ವಿಪರೀತವಾಗಿ ಆಗಿದೆ. ಆದರೆ ದೇಶದ ಅಭಿವೃದ್ಧಿ ಮಾತ್ರ ಆಗಿಲ್ಲ. ಇಷ್ಟೇ ಅಲ್ಲದೆ ಪ್ರತಿವರ್ಷವೂ ಬೆಳೆಯುತಕ್ಕ ಪ್ರದೇಶ ಕಡಿಮೆಯಾಗುತ್ತಿದೆಯೇ ಹೊರತು ಹೆಚ್ಚುತ್ತಿಲ್ಲ. ನಾವು 44-45ಕ್ಕೂ 1948-49ನೆಯ ಸಾಲಿನ ಲೆಕ್ಕವನ್ನು ನೋಡಿದರೆ—ಬತ್ತದ ಫಸಲು 8 ಲಕ್ಷ 44 ಸಾವಿರ ಎಕರೆಗಳಿದ್ದು 7 ಲಕ್ಷ 44 ಸಾವಿರಕ್ಕೆ ಇಳಿದಿದೆ. ರಾಗಿಯ ಫಸಲು 30 ಲಕ್ಷ ಎಕರೆಗಳಿದ್ದುದು, 18ಲಕ್ಷಕ್ಕೆ ಇಳಿದಿದೆ. ಜೋಳ ಮತ್ತು ಗೋಧಿ—4 ಲಕ್ಷ ಚಿಲ್ಲರೆ ಎಕರೆಗಳಿದ್ದುದು, 3 ಲಕ್ಷ ಚಿಲ್ಲರೆಗೆ ಇಳಿದಿದೆ. ಇತರೇ ಮಿರೆಟ್ಸ್ ಧಾನ್ಯಗಳು 3 ಲಕ್ಷ 90 ಸಾವಿರ ಎಕರೆಗಳಿದ್ದುದು, 3 ಲಕ್ಷ 48 ಸಾವಿರಕ್ಕೆ ಇಳಿದಿದೆ. ವ್ಯವಸಾಯ ಹೀಗೆ ಇಳಿಮುಖವಾಗುತ್ತಿರುವುದೇ ಹೆಚ್ಚು ಆಹಾರ ಬೆಳೆಸಬೇಕೆಂಬ ನೀತಿ? ಇದು ಯಾವ ನ್ಯಾಯ!

ಅಧ್ಯಕ್ಷರು.—ತಮಗೆ ಕೊಡಲಾಗಿದ್ದ ಕಾಲಾವಕಾಶಕ್ಕಿಂತ ತಾವು ಹೆಚ್ಚು ಕಾಲ ತೆಗೆದುಕೊಂಡಿದ್ದೀರಿ. 15 ನಿಮಿಷಗಳ ಮೇಲಾಯಿತು.

ಶ್ರೀ ಬಿ. ಹುಚ್ಚೇಗೌಡರು.—ತಾವು ಮಾತೆತ್ತಿದರೆ "ನಾವು ಇತರ ಎಲ್ಲಾ ಪ್ರಾಂತಗಳಿಗಿಂತಲೂ ಮುಂದುವರಿದಿದ್ದೇವೆ" ಎಂದು ಹೇಳುತ್ತೀರಿ. ಆದರೆ ನಾವು ಯಾವ ರೀತಿಯಲ್ಲಿ ಮತ್ತು ಯಾವ ಮಾರ್ಗದಲ್ಲಿ ಹಾಗೆ ಮುಂದುವರಿದಿರುತ್ತೇವೆಂದು ನೋಡುವುದಾದರೆ ನನಗೆ ಕಾಣುತ್ತಿರುವುದು ಒಂದೇ ಒಂದು ಮಾರ್ಗ. ವ್ಯವಸಾಯ ಹೆಚ್ಚಲಿ, ಹೆಚ್ಚಾಗದೆ ಇರಲಿ ಹೆಚ್ಚು ಆಹಾರ ಶೇಖರಣೆ ಮಾಡುತ್ತಿದ್ದೀರಿ. ಅದೂ ಸಂತೋಷ. ಆದರೆ ಪ್ರತಿಯೊಬ್ಬನ ಕುಟುಂಬಕ್ಕೆ ಕನಿಷ್ಠ ಪರಿಮಿತಿಯು ಆಹಾರ ಪ್ರಮಾಣ ಎಷ್ಟು ಬಿಡಬೇಕು ಎಂಬ ಅಂಶವನ್ನು ಲಕ್ಷಿಸದೆ ಆತನಿಗೆ ಉಳಿಯಲಿ ಅಥವಾ ಉಳಿಯದೆ ಇರಲಿ, ಆತನಲ್ಲಿರುವುದನ್ನೆಲ್ಲಾ ಕಿತ್ತುಕೊಂಡು ತಾವು ತರುತ್ತಿದ್ದೀರಿ. ಪಹಣಿಯಲ್ಲಿ 10-15 ಪಲ್ಲ ಬರೆದು, ಅವನಲ್ಲಿ ಅಷ್ಟು ಇರಲಿ ಅಥವಾ ಇಲ್ಲದೇ ಇರಲಿ, ಇದ್ದುದನ್ನೆಲ್ಲಾ ಕಿತ್ತುಕೊಂಡು ಬಂದಿರುತ್ತೀರಿ. ಈ ವಿಚಾರ ಒಂದರಲ್ಲಿ ಮಾತ್ರ ನಾವು ಎಲ್ಲಪ್ರಾಂತ್ಯಗಳಿಗಿಂತ ಮುಂದುವರೆದಿದ್ದೇವೆ; ಅಷ್ಟೆ.

ಶ್ರೀ ಟಿ. ಮರಿಯಪ್ಪನವರು (ಬಳ್ಳಾಡಳಿತ ಸಚಿವರು).—ಮಾನ್ಯ ಅಧ್ಯಕ್ಷರೆ, ಶ್ರೀಮಂತ ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣದ ಮೇಲೆ ಕೆಲವು ಮಾನ್ಯ ಸದಸ್ಯರುಗಳು ಸರ್ಕಾರಕ್ಕೆ ತಮ್ಮ ಅಮೂಲ್ಯವಾದ ಸಲಹೆಗಳನ್ನು ಕೊಟ್ಟಿದ್ದಾರೆ; ಆದರೆ ಇನ್ನೂ ಕೆಲವು ನಿರಾಧಾರವಾದ ಟೀಕೆಗಳೂ ಬಂದಿವೆ. ವಿಷಯಗಳನ್ನು ಪರಿಷ್ಕಾರವಾಗಿ ತಿಳಿದುಕೊಂಡು ಶ್ರೀ ಬಿ. ಹುಚ್ಚೇಗೌಡರು ತಮ್ಮ ಅಭಿಪ್ರಾಯವನ್ನು ರಚನಾತ್ಮಕ ರೀತಿಯಲ್ಲೋ ಅಥವಾ ಅದಕ್ಕೆ ವಿರೋಧವಾದ ರೀತಿಯಲ್ಲೋ ಕೊಟ್ಟಿದ್ದರೆ ನಾವು ಬಹಳ ಸಂತೋಷಪಡುತ್ತಿದ್ದೆವು. ಆಧಾರ ರಹಿತವಾದ ಟೀಕೆಗಳು ಬಂದಿದ್ದಾಗ್ಯೂ ಅವುಗಳಿಗೆಲ್ಲ ತಕ್ಕ ಉತ್ತರವನ್ನು ಕೊಡಲು ನಾನು ಪ್ರಯತ್ನಪಡುತ್ತೇನೆ. ಅನೇಕರಿಗೆ ಸರಿಯಾದ ವಿಷಯಗಳು ತಿಳಿಯದೆ ಇರುವಾಗ, ಅವರಿಗೆ ಒಂದಲ್ಲ ಒಂದು ರೀತಿಯಲ್ಲಿ ತಪ್ಪು ಭಾವನೆ ಮೂಡುವಂತೆ ಮಾಡಲು ಅವಕಾಶವಾಗದಿರಲೆಂಬ ಒಂದು ದೊಡ್ಡ ಭರವಸೆಯಿಂದ ನಾನೀಗ ಸತ್ಯಾಂಶಗಳೇನೆಂಬುದನ್ನು ಸಭೆಯ ಮುಂದಿಡಲು ಇಚ್ಛಿಸುತ್ತೇನೆ.

ಜನಾಬ್ ಮಹಮ್ಮದ್ ಇಮಾಂರವರು ಕೃಷ್ಣರಾಜಸಾಗರ ವಿಚಾರವಾಗಿ ಪ್ರಸ್ತಾಪಮಾಡಿದ್ದಾರೆ. ಆದರೆ ಈಗಾಗಲೇ ಪ್ರಾಜ್ಞರಿಂದ ಕೂಲಂಕಷವಾಗಿ ಸಮಿತಿಯೊಂದನ್ನು ರಚನೆಮಾಡಿ, ಅದು ಕಾರ್ಯಕ್ರಮವನ್ನು ನಡೆಸುತ್ತಿರುವಾಗ ಈ ಪ್ರಶ್ನೆಯನ್ನೇ ಎತ್ತಿದ್ದಿದ್ದರೆ ಚೆನ್ನಾಗಿತ್ತೆಂದು ನಾನು ತಿಳಿದುಕೊಂಡಿದ್ದೇನೆ.

ಜನಾಬ್ ಜೆ. ಮಹಮದ್ ಇಮಾಂರವರು.—ಬಹಳ ದುಡಿಕಿದ್ದಾರೆ .....

ಶ್ರೀ ಟಿ. ಮರಿಯಪ್ಪನವರು.—ಅಷ್ಟೊಂದು ಕಠಿಣವಾಗಿ ನಾನು ಹೇಳಲಾರೆ. ಆದರೆ ಅವರು ಅಡ್ಡದಾರಿ ಹಿಡಿದಿದ್ದಾರೆಂದು ನಾನು ತಿಳಿಯುತ್ತೇನೆ. ಅವರೇ ಈ ಹಿಂದೆಯೂ ಸಹ ಇದೇ ಪ್ರಸ್ತಾಪವನ್ನು ಕೆಲವು ಪತ್ರಿಕೆಗಳಲ್ಲೂ ಕೂಡ ಟೀಕೆಮಾಡಿರುವುದಾಗಿ ತಿಳಿಸಿದ್ದಾರೆ. ಆದರೆ ಅವರ ಗಮನಕ್ಕೆ ನಾನು ಕೆಲವು ಮುಖ್ಯವಾದ ಅಂಶಗಳನ್ನು ತರಬೇಕೆಂದಿದ್ದೇನೆ. ಆದರೆ ಅವರು ಈ ಹಿಂದೆ ಈ ಮರಾಮತ್ ಶಾಖೆಗೆ ಮಂತ್ರಿಗಳಾಗಿದ್ದರೆಂಬ ಅಂಶವನ್ನು ಅವರು ಮರೆತುಬಿಟ್ಟಿರುವಂತೆ ಕಾಣುತ್ತಿದೆ. ಹಿಂದೆ 1935-36ರಲ್ಲಿ ಇವರು ಮಂತ್ರಿಗಳಾಗಿದ್ದು 4 ವರ್ಷಗಳ ಅವಧಿಯಲ್ಲಿ ಈ ಕೃಷ್ಣರಾಜಸಾಗರದ ಅಣೆಕಟ್ಟಿಗೆ ಯಾವ ಮಾರ್ಪಾಡನ್ನೂ ಮಾಡಿರುವುದಿಲ್ಲ. ಹಿಂದಿನಿಂದಲೂ, ಯಾವಾಗ್ಯೂ ಮೂಲತಃ ಎಷ್ಟು ಪ್ರದೇಶದಲ್ಲಿ ವ್ಯವಸಾಯ ನಡೆದುಕೊಂಡು ಬರುತ್ತಿತ್ತೋ ಅಷ್ಟೇ ಪ್ರದೇಶದಲ್ಲಿ ನಮ್ಮ ಆಡಳಿತ ಬರುವತನಕವೂ ನಡೆದುಕೊಂಡು ಬರುತ್ತಿತ್ತು. ಎಷ್ಟು ಪ್ರದೇಶದಲ್ಲಿ ವ್ಯವಸಾಯ ನಡೆಯುತ್ತಿದೆ, ನೀರಿನ ಪ್ರಮಾಣವೆಷ್ಟಿದೆ, ನೀರು ಸರದಿ ಎಷ್ಟು ವಿಧಿಸಲಾಗಿದೆ ಎಂಬಿವೇ ಇತ್ಯಾದಿ ಮುಖ್ಯ ಕಾರಣಗಳನ್ನು ಸರಿಯಾಗಿ ವಿಮರ್ಶೆಮಾಡದೆ ಹಿಂದಿನಿಂದಲೂ ಕೈಬಿಟ್ಟು ಕೊಂಡು ಬಂದಿರುವುದೇ ಆ ಘಟನೆಗೆ ಮುಖ್ಯ ಕಾರಣಗಳಾಗಿವೆ.

ಆದರೆ ಆ ತಪಶೀಲು ವಿವರಗಳಿಗೆಲ್ಲ ನಾನೀಗ ಪ್ರವೇಶಮಾಡುವುದಿಲ್ಲ. ಈಗ್ಯೆ ಸರ್ಕಾರದವರು ಏನೇನು ಮುಂಜಾಗ್ರತೆಯ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ; ಅಥವಾ ಇಲ್ಲ ಎಂಬ ಬಗ್ಗೆ ಕೆಲವು ಅಂಶಗಳನ್ನು ಸೂಚಿಸಲೇ ಬೇಕಾಗಿದೆ. ಈ ಖಾತೆಯು ನನ್ನ ಆಡಳಿತಕ್ಕೆ ಬಂದುದು ತಾ॥ 13-8-1949ರಲ್ಲಿ. ಆ ಕೂಡಲೇ ನಾನು ಮಂಡ್ಯಾ ಜಿಲ್ಲೆಗೆ ಹೋಗಿ ಅಲ್ಲಿನ ಪ್ರಮುಖ ಜನರುಗಳನ್ನು ಬರಮಾಡಿಕೊಂಡು ನಾವು ಕೃಷ್ಣರಾಜಸಾಗರದ ನೀರಿನ ಮಟ್ಟವನ್ನು ಪರೀಕ್ಷಿಸಿದಾಗ ಕೇವಲ 124 ಅಡಿ ನೀರು ಮಾತ್ರ ಇತ್ತು. ಆದರೆ ಆಗ ನಾವು ಹಿಂಗಾರುಮಳೆ ಬರಬಹುದೆಂದು ಭಾವಿಸಿದ್ದೆವು. ಆದರೆ ಹಾಗೆ ಆದು ಬಾರದೆ ಇದ್ದುದರಿಂದ ಸೆಪ್ಟೆಂಬರ್ ತಿಂಗಳಲ್ಲೇ ನೀರಿನ ಮಟ್ಟವು 115 ಅಡಿಗಳಿಗೆ ಇಳಿದಿತ್ತು. ಆಗಲೇ ನಾನು ಇಲಾಖಾ ಮುಖ್ಯಸ್ಥರಿಗೂ ಮತ್ತು ಅಲ್ಲಿನ ರೈತರುಗಳಿಗೂ ನೀರನ್ನು ಎಷ್ಟು ಮಿತವ್ಯಯದಿಂದ ಉಪಯೋಗಿಸಿ ನಮ್ಮ ಅನುಕೂಲತೆಗಳಿನುಸಾರವಾಗಿ ನಡೆಸಬೇಕೆಂಬ ಬಗ್ಗೆ ಎಚ್ಚರಿಕೆ ಕೊಟ್ಟಿದ್ದೆನು. ಈ ಬಗ್ಗೆ 1949ನೆಯ ಸೆಪ್ಟೆಂಬರ್ ತಿಂಗಳಲ್ಲೇ ಒಂದು ತಿಳಿವಳಿಕೆಯ ಪ್ರಕಟಣೆಯೊಂದನ್ನು ಇಲಾಖೆ ಮುಖ್ಯಸ್ಥರಿಗೆ ಸಾದರುಮಾಡಲಾಗಿದೆ. ಅದರಂತೆ ಚೀಫ್ ಇಂಜಿನಿಯರವರು ಮತ್ತು ನಾವೂ ಎಲ್ಲಾ ಎಚ್ಚರಿಕೆಯ ಕಾರ್ಯಕ್ರಮಗಳನ್ನು ತೆಗೆದುಕೊಂಡಿದ್ದೇವೆ. ಆದಾಗ್ಯೂ ಇಷ್ಟಕ್ಕೇ ಸಾಲದೆಂದು ಅಲ್ಲಿನ ಖಾಸಗೀ ಮಹನೀಯರೆಲ್ಲರ ಸಹಕಾರ ಮತ್ತು ಸಹಾಯಗಳನ್ನು ಅಪೇಕ್ಷಿಸಿ, ಅವರೂ ನಾವೂ ಎಲ್ಲರೂ ಏಕೀಕರಿಸಿ, ಇರತಕ್ಕ ನೀರನ್ನು ಯಾವರೀತಿ ಉಪಯೋಗಿಸಬೇಕು, ಎಂಬ ಬಗ್ಗೆ 17—9—1949 ರಲ್ಲಿ ಒಂದು ನೋಟನ್ನು ಕಳಹಿಸಿದ್ದೇನೆ. ಆ ಬಗ್ಗೆ ಒಂದು ಸಮಿತಿಯನ್ನೂ ರಚನೆಮಾಡಿ ಅವರೂ ಸಹ ನೀರನ್ನು ಬಳಸತಕ್ಕ ಬಗ್ಗೆ ಬಹಳ ಕೆಲಸಮಾಡಿದ್ದಾರೆ. ಅಕ್ಟೋಬರ್ 19ನೆಯ ತಾರೀಖಿನೊಳಗಾಗಿ ಹಿಂಗಾರುಮಳೆಯಾಗಬಹುದೆಂದು ಭಾವಿಸಲಾಗಿತ್ತು. ಆದರೆ ಅದು ಬರಲಿಲ್ಲ. ಆ ಕೂಡಲೇ ನಾವು ಮದ್ರಾಸ್ ಸರ್ಕಾರದವರೊಡನೆ ನಮಗೆ ಬರಬೇಕಾಗಿದ್ದ ನೀರಿನ ನರಬರಾಯಿ ಬಾರದೇ ಹೋಗಿ ನಮಗೆ ನೀರಿನ ಕೊರತೆಯುಂಟಾಗಿದೆ, ಆದಕಾರಣ ತಾವು ಸ್ವಲ್ಪ ನೀರನ್ನು ಕಮ್ಮಿಮಾಡಿಕೊಳ್ಳಬೇಕೆಂದು ಕೇಳಬೇಕಾಯಿತು. ಆದರೆ ಅವರೂ ಸಹ ಅದಕ್ಕೆ ಒಪ್ಪಲಿಲ್ಲ. ನಾನು ಚೀಫ್ ಇಂಜಿನಿಯರಿಗೆ ಕಳುಹಿಸಿದ ನೋಟ್ ಪ್ರಕಾರ 18ನೆಯತಾರೀಖಿನ ದಿನವೇ ಮಂಡ್ಯಾಕ್ಕೆ ಹೋಗಿ, ಅಲ್ಲಿಗೆ ಶ್ರೀ ಎಚ್. ಕೆ. ವೀರಣ್ಣಗೌಡರನ್ನೂ, ಶ್ರೀ ಎ. ಜಿ. ಬಂದೀಗೌಡರನ್ನೂ, ಶ್ರೀ ಶಂಕರಗೌಡರನ್ನೂ ಮತ್ತು ಇರ್ವಿನ್ ಕಾಲಾ ಬೈಲಿನ ಪ್ರಮುಖ ವ್ಯಕ್ತಿಗಳನ್ನೂ ಬರಮಾಡಿಕೊಂಡು ಅಲ್ಲಿ 18ನೆಯ ತಾರೀಖಿ ಸಭೆ ಸೇರಿಸಿ ಎಲ್ಲ

ವಿಚಾರಗಳನ್ನೂ ಕೂಲಂಕಷವಾಗಿ ಪರಿಶೀಲನೆಮಾಡಿ ಒಂದು ನಿರ್ಧಾರಕ್ಕೆ ಬರಲಾಯಿತು. ಆ ತೀರ್ಮಾನದ ಪ್ರಕಾರ ಇಂತಿಂಥಾ ಪ್ರದೇಶದಲ್ಲೇ ಕಬ್ಬನ್ನು ಬೆಳೆಯಬೇಕೆಂದೂ, ಬಾಕಿ ಪ್ರದೇಶಗಳಲ್ಲಿ ಮಳವಳ್ಳಿ ಇತ್ಯಾದಿ ಕಡೆ ಬತ್ತವನ್ನು ಬೆಳೆಯಬೇಕೆಂದೂ, ಇನ್ನಿತರ ಪ್ರದೇಶಗಳಲ್ಲಿ ಸಮಿಡ್ಸ್ಟ್ರಿ ಕ್ರಾಪ್ಸುಗಳನ್ನು ಬೆಳೆಯಬೇಕೆಂಬ ತೀರ್ಮಾನವನ್ನು ಕೂಡ ಆ ಸಭೆಯಲ್ಲೇ ಮಾಡಲಾಗಿತ್ತು. 1949ನೆಯ ಇಸವಿಯ ಡಿಸೆಂಬರ್ 15ರಲ್ಲೇ ನಾನು, ಚೀಫ್ ಎಂಜಿನಿಯರು ಮತ್ತು ಆಹಾರ ಇರಾಖೆ ಕಮಿಷನರು ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟ ಬಹಳ ಕಡಿಮೆಯಾಗಿದೆ, ಆದ್ದರಿಂದ ನೀರನ್ನು ಎಚ್ಚರಿಕೆಯಿಂದ ಉಪಯೋಗಿಸಬೇಕು ಎಂದು ಚರ್ಚೆಮಾಡಿರುವುದು ಆ ದಿನದ ವಿಶ್ವಕರ್ಣಾಟಕ ಮತ್ತು ಇತರ ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಆಮೇಲೆ ಫೆಬ್ರುವರಿ ಒಂದನೆಯ ತಾರೀಖು ಸರ್ಕಾರದವರು ಒಂದು ಪ್ರೆಸ್ ನೋಟ್ ಮೆಂಟನ್ನು ಕೂಡ ಹೊರಡಿಸಿದ್ದಾರೆ. ಅದರಲ್ಲಿ ಸರ್ಕಾರದವರು ಖಚಿತವಾಗಿ ಈ ರೀತಿ ಹೇಳಿದ್ದಾರೆ :—

"The storage level of the Krishnarajasagara Reservoir on 14th January 1950 was 72·24 feet as against 103·11 feet on the corresponding date of the previous year. Allowing for Madras issues, which is inevitable, the level is expected to be at about 67 feet by the end of February 1950. This height will not force any water into the Visvesvaraya Canal. Hence no supply of water is at all possible to the areas under the Visvesvaraya Canal beyond 21st February 1950. This is a most unfortunate situation which has arisen owing to failure of adequate rains in the Cauvery basin last monsoon. It is very necessary therefore that the raiyats who have crops under the Visvesvaraya Canal should take immediate steps to protect their crops by sinking wells and making use of lift irrigation."

ಇದು 1950ನೆಯ ಇಸವಿ ಫೆಬ್ರುವರಿ ಒಂದನೆಯ ತಾರೀಖಿನ ಪ್ರೆಸ್‌ನೋಟ್‌ನಲ್ಲಿ ಪ್ರಕಟವಾಗಿದೆ. ಫೆಬ್ರುವರಿ 12ರಲ್ಲಿ ಕೃಷ್ಣರಾಜಸಾಗರದ ವರ್ಕಿಂಗ್ ಕಮಿಟಿಯ ಸದಸ್ಯರು ಸಭೆ ಸೇರಿ ಈ ವಿಷಯವನ್ನು ಕೂಲಂಕಷವಾಗಿ ವಿಚಾರಮಾಡಿ ರೈತರಿಗೆ ಒಂದು ರೀತಿ ಸಹಾಯಮಾಡಬೇಕು. ಸರ್ಕಾರದವರೂ, ಸಕ್ಕರೆ ಕಂಪೆನಿಯವರೂ ಉಭಯತ್ರರೂ ಸಹಾಯಮಾಡಿ ಅಲ್ಲಿರುವ ಕಬ್ಬಿನ ಪ್ರದೇಶವನ್ನು ಕಾಪಾಡಿಕೊಳ್ಳಬೇಕು ಎಂದು ನಿರ್ಧರಿಸಿದ್ದಾರೆ. ಅದರಂತೆ 1950ನೆಯ ಇಸವಿ ಫೆಬ್ರುವರಿ 18ರಲ್ಲೇ ಒಂದು ಮೀಟಿಂಗ್‌ಮಾಡಿ ಆದಾದ ಆರು ದಿವಸಗಳಲ್ಲೇ ರೈತರಿಗೆ ಯಾವ ರೀತಿ ಸರ್ಕಾರದವರೂ, ಮತ್ತು ಸಕ್ಕರೆ ಕಂಪೆನಿಯವರೂ ಸಹಾಯ ಮಾಡಬೇಕು ಎಂಬ ವಿಷಯದಲ್ಲಿ ಒಂದು ಆರ್ಡರನ್ನು ಹೊರಡಿಸಲಾಗಿದೆ. ಪುನಃ 1950ನೆಯ ಇಸವಿ ಫೆಬ್ರುವರಿ 21ರಲ್ಲಿ ಇನ್ನೊಂದು ಪ್ರೆಸ್‌ನೋಟ್ ಹೊರಟಿದೆ. ಅದರಲ್ಲಿ ಈ ರೀತಿ ಹೇಳಿದೆ :—

'Owing to the present low-level of water in the Krishnarajasagar Reservoir intensive cultivation of Kar Ragi and Paddy crops is found to be not possible in Mandya, Maddur and Malvalli Taluks as in previous years."

ಆ ಮೇಲೆ 14—5—1950ರಲ್ಲಿ ಮತ್ತೊಂದು ಪ್ರೆಸ್‌ನೋಟ್ ಹೊರಟಿದೆ; ಎಲ್ಲ ವಿಷಯವೂ ಅದರಲ್ಲಿ ನಮೂದಾಗಿದೆ. ಆದ್ದರಿಂದ ಹಿಂಗಾರು, ಮುಂಗಾರು ಮಳೆ ಸರಿಯಾಗಿ ಸಕಾಲದಲ್ಲಿ ಯಾವಾಗ ಆಗಲಿಲ್ಲವೋ ಆ ಕೂಡಲೆ ಸರ್ಕಾರದವರು ಲಿಖಿತಮೂಲಕ ಸಾರ್ವಜನಿಕರಿಗೆ ವಿಷಯಗಳನ್ನು ತಿಳಿಸಿ ತಕ್ಕ ಕಾರ್ಯಕ್ರಮಗಳನ್ನು ಕೈಕೊಂಡಿದ್ದಾರೆ. ಆದ್ದರಿಂದ ಆ ವಿಷಯವನ್ನು ಅಲ್ಲಿಗೇ ಬಿಡುತ್ತೇನೆ : ಮುಂದೆ ವಿವರಿಸುವುದು ಅನಾವಶ್ಯಕ.

ಇದೇ ಸಂದರ್ಭದಲ್ಲಿ ಮತ್ತೊಂದು ವಿಷಯ ಹೇಳಿದರೆ ಅಪ್ರಕೃತವಾಗಲಾರದು. ಕೆಲವರಿಗೆ ಜ್ಞಾಪಕಶಕ್ತಿ ಬಹಳ ಕಡಿಮೆ, 1944ರಲ್ಲಿ ಶಿವನಸಮುದ್ರದಲ್ಲಾದ ದುರ್ಘಟನೆಯ ವಿಚಾರವಾಗಿ ನಾನು ಒಂದು ವಿಷಯವನ್ನು 1944ನೆಯ ಇಸವಿ ಜೂಲೈ 20ರಲ್ಲಿ ನ್ಯಾಯವಿಧಾಯಕ ಸಭೆಯಲ್ಲಿ ತಂದಿದ್ದೆ. ಆಗ ಅಚಾತುರ್ಯದಿಂದ ಏನೊಂದು ಘಟನೆ ನಡೆದುಹೋಗಿ ದೇಶದಲ್ಲಿ ಅಸಹನೀಯವಾತಾವರಣವೆದ್ದಿತ್ತು ಎಂಬುದನ್ನು ಸೂಚಿಸಲು ಒಂದು ಸೂಚನೆ ತಂದಿತ್ತು. ಜನಾಬ್ ಇಮಾಂರವರು ಏನೋ ಒಂದು ವದಂತಿ ಮೇಲೆ ಹೇಳಿಕೆ ಕೊಡದೆ ನಿರ್ಧಾರವಾದ ಅಂಶಗಳ ಮೇಲೆ ಈ ದಿವಸ ಟೀಕೆಮಾಡಿದ್ದರೆ ಚೆನ್ನಾಗಿತ್ತು. ಅವರು ತಮ್ಮ ಕಾಲದಲ್ಲಿ ಯಾವ ರೀತಿ ಇತ್ತು, ಈಗ ಹೇಗಿದೆ ಎಂಬುದನ್ನು ಸ್ವಲ್ಪ ಯೋಚನೆಮಾಡಿದ್ದರೆ ಈ ರೀತಿ ಟೀಕೆಯಾಡಲು ಅವಕಾಶವಿರುತ್ತಿರಲಿಲ್ಲ, ಅದು ರಚನಾತ್ಮಕವಾಗುತ್ತಿತ್ತು ಎಂದು ಭಾವಿಸುತ್ತೇನೆ. ಆದರೆ ಒಂದು ವಿಷಯ. ನಾನು ನ್ಯಾಯವಿಧಾಯಕ ಸಭೆಯಲ್ಲಿ ಮಾಡಿರುವ ಭಾಷಣವನ್ನು ಬೇಕಾದರೆ ಪುನಃ ಓದಿ ನೋಡಲು, ಅದು ಬಿಟ್ಟು ನಿರಾಧಾರವಾಗಿ ಟೀಕೆಮಾಡುವುದು ಸರಿಯಲ್ಲ. ಆಗ ಸರ್ಕಾರದ ಗಮನವನ್ನು ಜನರ ಕಷ್ಟದ ಕಡೆಗೆ ಎಳೆದಿದ್ದೇವೆ, ಎಷ್ಟೋ ಜವಾಬ್ದಾರಿಯಿಂದ ಆ ದಿವಸ ವರ್ತಿಸಿದ್ದೇವೆ. ಹಾಗಿರುವಾಗ ಜನಾಬ್ ಇಮಾಂರವರು ಈಗ ಹೇಗೆ ವರ್ತಿಸಿದ್ದಾರೆಂಬುದನ್ನು ಮಾನ್ಯನದನ್ಯರೇ ಪರಿಶೀಲನಬಹುದು. ಆಗ ನಾನು ಹೇಳಿರುವುದು ಈ ರೀತಿಯಾಗಿದೆ :—"ಕಳೆದ ಮೇ 18ನೆಯ ತಾರೀಖಿನ ದಿವಸ ಶಿವನಸಮುದ್ರದಲ್ಲುಂಟಾದ ಆಕಸ್ಮಿಕ ದುರ್ಘಟನೆ". ಅದುಂದ ಮನುಷ್ಯನ ಅಚಾತುರ್ಯವು ವ್ಯಕ್ತಪಡುತ್ತದೆ ಎಂದು ಹೇಳುವುದಕ್ಕೆ ಪ್ರಯತ್ನಮಾಡಿದ್ದೇವೆ. "ಈ ದುರ್ಘಟನೆಯು ಇಡೀ ದೇಶವನ್ನೇ ತಲ್ಲಣಗೊಳಿಸಿದೆ. ಮೈಸೂರು ದೇಶದ ಕೈಗಾರಿಕೆಗಳೆಲ್ಲವೂ ಇದರಿಂದ ನಿಂತುಹೋಗಿವೆ," ಎಂದು ಹೇಳಿದ್ದೇನೆ. ದೇಶಕ್ಕೆ ಒಂದು ದೊಡ್ಡ ವಿಪತ್ತುಂಟಾಗಿದೆಯೆಂದು ಸರ್ಕಾರದ ಗಮನವನ್ನು ಸೆಳೆದು, ಜನಜೀವನವನ್ನೇ ಅದು ಕಲಕಿದೆಯೆಂಬುದೂ ಅದಕ್ಕೆ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕೆಂದೂ ತಿಳಿಸಿದ್ದೇವೆ. ಆದ್ದರಿಂದ ವಿಷಯಗಳನ್ನು ಸರಿಯಾಗಿ ತಿಳಿದುಕೊಳ್ಳದೆ, ವದಂತಿಗಳಿಗೆ ಕಿವಿಗೊಟ್ಟು ನಿರಾಧಾರವಾಗಿ ಟೀಕಿಸಬಾರದು ಎಂದು ಜನಾಬ್ ಇಮಾಂರವರಿಗೆ ತಿಳಿಸಬೇಕಾಗಿದೆ. ಆದರೆ ಇಷ್ಟು ಮಾತ್ರ ಹೇಳುತ್ತೇನೆ. ಈ ವಿಷಯವನ್ನೆಲ್ಲಾ ಸರಿಯಾಗಿ ಕೂಲಂಕಷವಾಗಿ ವಿಚಾರಮಾಡುವುದಕ್ಕೆ ರಿಟೈರ್ ಆದ ಚೀಫ್ ಎಂಜಿನಿಯರುಗಳಿಂದ ಕೂಡಿರುವ ಒಂದು ಸಮಿತಿಯನ್ನು ಸರ್ಕಾರದವರು ನೇಮಕ ಮಾಡಿದ್ದಾರೆ. ಅವರು ಏನು ನಲಹೆ ಮಾಡುತ್ತಾರೋ ಅದನ್ನು ನೋಡದೆ ಅದಕ್ಕೆ ಪೂರ್ವಭಾವಿಯಾಗಿ ಹೀಗೆ ಇರಬಹುದೆಂದು ಊಹಿಸುವುದೂ, ಯಾವ ರೀತಿ ಕಾರ್ಯಗತಮಾಡಬೇಕೆಂದು ಹೇಳುವುದೂ, ಕೃಷ್ಣರಾಜ ಸಾಗರದ ನೀರನ್ನು ಯಾವರೀತಿ ಉಪಯೋಗಿಸಬೇಕೆಂದು ಹೇಳುವುದೂ ಸೂಕ್ತವಲ್ಲ. ಹೇಗೆ ಮಾಡಿದರೆ ರೈತರಿಗೆ ಸಹಾಯವಾಗಬಹುದು, ಯಾವ ರೀತಿ ಏರ್ಪಡಿಸಿದರೆ ಅಂಥ ಕಷ್ಟಗಳಿಗೆ ಸಿಕ್ಕುವುದಿಲ್ಲ ಎಂಬುದು ಪ್ರಾಮುಖ್ಯವಾದ ಪ್ರಶ್ನೆ. ಆದ್ದರಿಂದ ತಜ್ಞರ ವರದಿ ಬಂದಕೂಡಲೆ ಸರ್ಕಾರದವರು ಬಹು ಹೆಚ್ಚು ಅನುಭವ ಮತ್ತು ದೀರ್ಘವಾದ ಆಲೋಚನೆಯಿಂದ ತಕ್ಕ

ಕಾರ್ಯಕ್ರಮ ಕೈಕೊಳ್ಳುತ್ತಾರೆಂದು ಅಷ್ಟು ಮಾತ್ರ ಭರವಸೆ ಕೊಡುತ್ತೇನೆ.

ಆ ಮೇಲೆ ಇದೇ ಸಂದರ್ಭದಲ್ಲಿ ಶ್ರೀಮನ್ಮಹಾರಾಜರವರ ಭಾಷಣದಲ್ಲಿ ಹೇಳಿರುವ ಹಾಗೆ ಬೇರೆ ಒಂದು ಸಮಿತಿ ಕೂಡ ಇದೆ. ಅವರು ವಿಷಯವನ್ನು ಪರಿಶೀಲಿಸುತ್ತಿದ್ದಾರೆ.

ಇನ್ನೊಂದು ವಿಚಾರ ಈ ಸಂದರ್ಭದಲ್ಲಿ ಆಹಾರ ಪದಾರ್ಥಗಳನ್ನು ಶೇಖರಣೆಮಾಡುವ ವಿಚಾರದಲ್ಲಿ ಟೀಕೆ ಎದ್ದಿದೆ. ಜನರಿಂದ ಬೇಕಾದಷ್ಟು ದೋಚುತ್ತಾರೆಂದು ಮಾನ್ಯಸದಸ್ಯರು ಹೇಳಿದರು. ಅದಕ್ಕೆ ಇಷ್ಟು ಅರಿಕೆ ಮಾಡುತ್ತೇನೆ. ಸರ್ಕಾರದವರು ಎಂದಿಗೂ ಆ ಕೆಲಸ ಮಾಡುವುದಿಲ್ಲ. ಸಾಧ್ಯವಾದಷ್ಟು ಒಳ್ಳೆಯ ರೀತಿಯಲ್ಲಿ ಸಂಗ್ರಹಿಸಿಕೊಡಬೇಕೆಂಬುದೇ ಸರ್ಕಾರದ ಉದ್ದೇಶ. ಶೇಖರಣೆಯ ಅಂಕಿಅಂಶಗಳನ್ನು ಎರಡು ಮೂರು ವರ್ಷಗಳಿಂದ ನೋಡಿದರೆ ಅದು ಚೆನ್ನಾಗಿ ಇದೆಯೆಂದು ಕಂಡುಬರುತ್ತದೆ. 1943ನೆಯ ಇಸವಿಯಿಂದ 1945ರವರೆಗಿದ್ದ ಟೀಕೆ ಈಗಬಾರದೇ ಇರುವುದಕ್ಕೆ ಸಾಧ್ಯವಾದಷ್ಟು ಕ್ರಮಕೈಗೊಂಡಿದೆ. ನಾಕರರ ಅಚಾತುರ್ಯದಿಂದ ತೊಂದರೆಯಾಗಿದ್ದರೆ ಅದಕ್ಕೆ ತಕ್ಕ ಕ್ರಮ ಜರುಗಿಸಿದೆ. ಯಾವುದಕ್ಕೂ ದೊರದೃಷ್ಟಿಯಿರಬೇಕು. ಜನಾಬ್ ಇಮಾಂರವರು ಆಕ್ಷೇಪಿಸಿದಂತೆ ಬೆಲೆ ಜಾಸ್ತಿ ಮಾಡಿರುವುದೇನೋ ನಿಜ. ಆದರೆ ಆ ರೀತಿ ಮಾಡಲು ಅನೇಕ ಕಡೆಗಳಿಂದ ಸಲಹೆ ಬಂದಿದ್ದರಮೇರೆ ಬಹಳ ಯೋಚನೆಮಾಡಿ ಜಾರಿಗೆ ತರಲಾಗಿದೆ., ಖರ್ಚು ಸರ್ಕಾರಕ್ಕೆ ಹೆಚ್ಚಿದೆ. ಕೇಂದ್ರಸರ್ಕಾರವು ನೇಮಿಸಿದ್ದ ತಿರುಘುಪರಾವ್ ಸಮಿತಿಯವರೂ ಕೂಡ ಮೈಸೂರು ಸಂಸ್ಥಾನದವರು ಹೇರಳವಾಗಿ ನಷ್ಟಮಾಡಿಕೊಳ್ಳುತ್ತಿದ್ದಾರೆ. ಅದನ್ನು ಬೇಗ ತಪ್ಪಿಸಬೇಕು ಎಂದು ಸಲಹೆ ಮಾಡಿದ್ದಾರೆ. ಆ ವರದಿಯನ್ನು ಓದಿದರೆ ವಿಷಯ ಚೆನ್ನಾಗಿ ತಿಳಿಯಬಹುದು. ಈಗ ಇಂಡಿಯಾ ಸರ್ಕಾರದಲ್ಲಿ ಡೆಪ್ಯುಟಿ ಮಿನಿಸ್ಟರ್ ಆಗಿರುವ ಶ್ರೀ ತಿರುಮಲರಾಯರೇ ಆ ಸಮಿತಿಯ ಅಧ್ಯಕ್ಷರಾಗಿದ್ದರು: ಆ ಸಮಿತಿಯವರು ತಮ್ಮ ವರದಿಯಲ್ಲಿ ಮೈಸೂರು ಸಂಸ್ಥಾನದಲ್ಲಿ ಧಾನ್ಯಸಂಗ್ರಹಣದ ವ್ಯವಸ್ಥೆ ಬಹಳ ಚೆನ್ನಾಗಿದೆ, ಆದರೆ ಈ ಧಾನ್ಯದ ಹಂಚಿಕೆಯ ಸಂಬಂಧವಾಗಿ ಇಷ್ಟು ನಷ್ಟವಾಗಬಾರದೆಂದು ಅಭಿಪ್ರಾಯವನ್ನು ಸೂಚಿಸಿದ್ದಾರೆ. ಇದನ್ನು ಮಾನ್ಯಸದಸ್ಯರ ಗಮನಕ್ಕೆ ತರುತ್ತೇನೆ.

ಆ ಮೇಲೆ ಹೆಚ್ಚು ಆಹಾರ ಬೆಳೆಯುವ ಯೋಜನೆಯ ವಿಚಾರ ಹೇಳಿದರು. ಈ ಯೋಜನೆಗೆ ಈ ಹೆಸರನ್ನು ಕೊಡದಿದ್ದರೆ ಚೆನ್ನಾಗಿತ್ತು ಎನ್ನಿಸುತ್ತದೆ ನನಗೆ. ಸರ್ಕಾರದವರೇ ಆಹಾರ ಬೆಳೆದು ಹಂಚುತ್ತಾರೆಂದು ಶ್ರೀ ಹುಚ್ಚೇಗೌಡರು ತಿಳಿದುಕೊಂಡಿದ್ದರೆ ಅದು ತಪ್ಪು ಅಭಿಪ್ರಾಯವೆಂದು ಹೇಳಬೇಕಾಗಿದೆ. ಯಾವ ಯಾವ ಕಾರ್ಯಗಳನ್ನು ಸರ್ಕಾರದವರು ಕೈಕೊಂಡರೆ ಒಳ್ಳೆಯದು. ಯಾವ ಯಾವುದನ್ನು ಪ್ರಜೆಗಳು ಕೈಕೊಂಡರೆ ಒಳ್ಳೆಯದು ಎಂಬುದನ್ನು ಸ್ಪಲ್ಪಯೋಚಿಸಬೇಕು. ಇದು ಸರ್ಕಾರದವರೇ ಮಾಡುವ ಕೆಲಸವಲ್ಲ. 1943ನೆಯ ಇಸವಿಯಿಂದ 1949–50ನೆಯ ಇಸವಿಯವರೆಗೆ ಈ ಹೆಚ್ಚು ಆಹಾರ ಬೆಳೆಯುವ ಯೋಜನೆಯಲ್ಲಿ ಏನೇನು ಮಾರ್ಪಾಡಾಗಿದೆ ಎಂಬುದನ್ನು ಜನಾಬ್ ಇಮ್ತಾಂರವರು ಯೋಚಿಸಿನೋಡಬೇಕು. ಅವರು ಮಂತ್ರಿಗಳಾಗಿದ್ದಾಗ ಈ ಯೋಜನೆ ಪ್ರಾರಂಭವಾಯಿತು. ಶ್ರೀ ಚೆನ್ನಬಸಪ್ಪನವರು ಈಗ ಸಭೆಯಲ್ಲಿ ಹಾಜರಿಲ್ಲ, ಇದ್ದಿದ್ದರೆ ಇನ್ನೂ ಹೆಚ್ಚು ಈ ವಿಷಯ ಹೇಳುತ್ತಿದ್ದೆ. ಈ ಯೋಜನೆಯ ಸಂಬಂಧವಾಗಿ ಹಿಂದೆ ಇದ್ದ ರಿಯಾಯಿತಿಗಳನ್ನೆಲ್ಲಾ ವಜಾಮಾಡಿದ್ದೇವೆ. ಹಿಂದೆ ಈ ರಿಯಾಯಿತಿಗಳು ಯಾರಿಗೆ ಸಿಕ್ಕಬೇಕೋ ಅವರಿಗೆ ಸಿಕ್ಕಿಲ್ಲ. ಯಾರಿಗೆ ಸಿಕ್ಕಬಾರದೋ ಅವರಿಗೆ ಸಿಕ್ಕಿವೆ. ಅದರಿಂದ ತಕ್ಷಣ ಅದನ್ನು ನಿಲ್ಲಿಸಿದೆವು. ಈಗ ರೈತರಿಗೆ ಈ ಸಂಬಂಧವಾಗಿ ಬೀಜ, ಗೊಬ್ಬರ ಮತ್ತು ಕಬ್ಬಿಣದ ಸಾಮಾನು ಇಷ್ಟನ್ನು ಮಾತ್ರ ರಿಯಾಯಿತಿ ದರದಲ್ಲಿ ಕೊಡುತ್ತೇವೆ. ಹೆಚ್ಚು ಬೆಳೆ ಬೆಳೆಯುವ ಯೋಜನೆ 1943 ರಲ್ಲೇ ಪ್ರಾರಂಭಮಾಡಿದ ಯೋಜನೆ. ಹೊಸದಾಗಿ ಈಚೆಗೆ ಪ್ರಾರಂಭಿಸಿದ್ದೇನೂ ಅಲ್ಲ. ಆದರೆ ಇದರಲ್ಲಿ ಅನೇಕ ಬದಲಾವಣೆಗಳಾಗಿವೆ. ನೆನ್ನೆ ಇದರ ಸಂಬಂಧವಾದ ಒಂದು ವಿವರಣೆಯ ಪ್ರತಿಗಳನ್ನು ಸಭೆಗೆ ಹಂಚಿಸಲಾಗಿದೆ. ಆದರಲ್ಲಿ ತಿಳಿಸಿರುವಂತೆ ಈ ಯೋಜನೆಯನ್ನು reorientate ಮಾಡಿದ್ದೇವೆ. ಯಾವ ಲಾಭವನ್ನೂ ತೆಗೆದುಕೊಳ್ಳದೆ ರೈತರಿಗೆ ಗೊಬ್ಬರ, ಕಬ್ಬಿಣದ ಸಾಮಾನು ಮತ್ತು ಬೀಜ ಕೊಡುತ್ತೇವೆ.

ಬೆಳೆ ಹೆಚ್ಚಬೇಕಾದರೆ ದೇಶದಲ್ಲಿ ನೀರಾವರಿ ಕೆಲಸಗಳು ಹೆಚ್ಚಿ ನೀರು ಸರಬರಾಯಿ ಚೆನ್ನಾಗಿ ಆಗಬೇಕು. ನಮ್ಮ ದೇಶದಲ್ಲಿ ಮಳೆಯನ್ನು ನಂಬಿಕೊಂಡು ವ್ಯವಸಾಯದ ಕೆಲಸಮಾಡುವುದು ಕಷ್ಟ. ಈ ಕಾರಣದಿಂದ ನೀರಾವರಿ ಅಭಿವೃದ್ಧಿ ಕಾರ್ಯಕ್ಕೆ ಸರ್ಕಾರದವರು 1945–50 ರಿಂದ ಹೆಚ್ಚಿನ ಗಮನ ಕೊಟ್ಟಿದ್ದಾರೆ.

ಈ ವಿಚಾರಕ್ಕೆ ಸಂಬಂಧಪಟ್ಟ ವಿವರಗಳನ್ನೊಳಗೊಂಡ ಹನ್ನೆರಡು ಪತ್ರಿಕೆಗಳನ್ನು ಮಾನ್ಯ ಸದಸ್ಯರಿಗೆಲ್ಲ ಹಂಚಲಾಗಿದೆ. ಇದನ್ನೂ ಮತ್ತೆ ಹೆಚ್ಚು ಹೇಳಬೇಕಾಗಿಲ್ಲ. ಅದೃಷ್ಟವಶಾತ್ ನಮ್ಮ ಸೌಭಾಗ್ಯದಿಂದಲೋ ಏನೋ ಕೇಂದ್ರ ಸರ್ಕಾರದವರು ಈ ಕಾರ್ಯಕ್ಕೆ ನವಂಗೆ ಹಣ ಸಹಾಯಮಾಡಿದ್ದಾರೆ. 1949–50ನೆಯ ಸಾಲಿನಲ್ಲಿ 42 ಲಕ್ಷ ರೂಪಾಯಿ ಗ್ರಾಂಟನ್ನೂ 29½ ಲಕ್ಷ ರೂಪಾಯಿ ಸಾಲವನ್ನೂ ಕೊಟ್ಟಿದ್ದಾರೆ. 1950–51ನೆಯ ಸಾಲಿನಲ್ಲಿಯೂ ಕೂಡ ಹೀಗೆ ಗ್ರಾಂಟನ್ನೂ ಸಾಲವನ್ನೂ ಕೊಟ್ಟು ಸಹಾಯಮಾಡುತ್ತೇವೆಂದು ಹೇಳಿ ಒಪ್ಪಿದ್ದಾರೆ. ಈ ಸಂದರ್ಭದಲ್ಲಿ ಒಂದೆರಡು ವಿಷಯಗಳನ್ನು ಸಭೆಯ ಗಮನಕ್ಕೆ ತಂದರೆ ಈ ಯೋಜನೆಗೆ ಸಂಬಂಧಪಟ್ಟ ಏರ್ಪಾಡುಗಳು ಎಷ್ಟು ತೀವ್ರವಾಗಿ ನಡೆದಿವೆ ಯೆಂಬುದು ಮನದಟ್ಟಾಗುತ್ತದೆ. 5ನೆಯ ಪರಿಶಿಷ್ಟವನ್ನು ನೋಡಿದರೆ ಚೆನ್ನಾಗಿ ಅರ್ಥವಾಗುತ್ತದೆ. ದೊಡ್ಡ ದೊಡ್ಡ ನೀರಾವರಿ ಕಾಮಗಾರಿಗಳು ಬಹಳ ಜೋರುಕಾಗಿ ನಡೆಯುತ್ತಿವೆ. ಎರಡು ಪೂರ್ತಿಯಾಗಿವೆ, ಮಿಕ್ಕವು ಆಗುವುದರಲ್ಲಿವೆ. ಜಮೀನು ಅಭಿವೃದ್ಧಿಯೋಜನೆಯಲ್ಲಿ 175 ಕೆಲಸಗಳಲ್ಲಿ 50 ಮುಗಿದಿವೆ. ನದಿ ನಾರೆಗಳ ರಿಪೇರಿ ಮತ್ತು ಅಭಿವೃದ್ಧಿಕಾಮಗಾರಿಗಳನ್ನು ಮಾಡಿದ್ದೇವೆ. ಇದಕ್ಕೆ 29 ಲಕ್ಷ ಚಿಲ್ಲರೆ ಖರ್ಚಾಗಿದೆ. ಕೆಲವು ಕಡೆ ಇವುಗಳ ಸ್ಥಿತಿ ಎಷ್ಟುಮಟ್ಟಿಗಿತ್ತು ಎಂಬುದಕ್ಕೆ ಉದಾಹರಣೆ ಹೇಳುತ್ತೇನೆ. ರಾಮದೇವರ ಕಟ್ಟೆಯಲ್ಲಿ 40 ಅಡಿ ನೀರು ನಿಲ್ಲಬೇಕೆಂದು ಇದೆ. ಆದರೆ 20 ಅಡಿಯಷ್ಟು ಮಾತ್ರ ಇತ್ತು; ಇಷ್ಟು ಶೋಚನೀಯ ಸ್ಥಿತಿಯಲ್ಲಿತ್ತು. ಇದರಿಂದ ರೈತರಿಗೆ ತುಂಬಾ ತೊಂದರೆಯಾಗುತ್ತಿತ್ತು. ಇದರ ರಿಪೇರಿ ತೀವ್ರವಾಗಿ ನಡೆಯುತ್ತಿದೆ. 690 ಮೈನರ್ ಕೆರೆಗಳ ರಿಪೇರಿ ಕೆಲಸಗಳು ನಡೆಯುತ್ತಿವೆ, ಅದರಲ್ಲಿ 150 ಕಾಮಗಾರಿಗಳನ್ನು ಸಂಪೂರ್ಣಮಾಡಿದ್ದೇವೆ. ಇದುವರೆಗಾಗಲೇ 13ಲಕ್ಷದ 92 ಸಾವಿರ ರೂಪಾಯವರೆಗೆ ಖರ್ಚಾಗಿದೆ, ಆ ಮೇಲೆ, ಇರಿಗೇಷನ್ ಸೆಸ್ ಫಂಡ್ ಕಾಮಗಾರಿಗಳು, ಎಂದರೆ ಕೆರೆಗಳ ತೂಬುಗಳು, ಫೀಡರ್ ನಾರೆಗಳು, ಕೋಡಿ ಮುಂತಾದುವುಗಳ ರಿಪೇರಿ ಕೆಲಸಗಳು. ಇಂತಹ ಕೆಲಸಗಳು ಮಾಡಬೇಕಾದ್ದು ಬಹಳ ಇವೆ. ನಮ್ಮ ಮೈಸೂರ

ಸಂಸ್ಥಾನದಲ್ಲಿ 29 ಸಾವಿರ ಚೆದುರ ಮ್ಯೂಲ ಪ್ರದೇಶದಲ್ಲಿ 26 ಸಾವಿರ ಕೆರೆಗಳಿವೆ. ಇವುಗಳನ್ನೆಲ್ಲಾ ಮೊದಲೆ ನಿಂದಲೂ ಚೆನ್ನಾಗಿಟ್ಟಿದ್ದಿದ್ದರೆ ಈ ಆಹಾರಾಭಾವ ನವು ಬರುತ್ತಲೇ ಇರಲಿಲ್ಲ. ಅನೇಕ ಕೆರೆಗಳ ರಿಪೇರಿ ಆರಬೇಕಾಗಿವೆ. ಈಗ ಈ ಕಾರ್ಯಕ್ಕೆ ಹೆಚ್ಚು ಗಮನ ಕೊಡುತ್ತಿದ್ದೇವೆ. ಮೂರು ಸಾವಿರ ಕೆರೆಗಳನ್ನು ಈಗಾಗಲೇ ರಿಪೇರಿಮಾಡಿದ್ದೇವೆ. ಇದಕ್ಕೆ 18 ಲಕ್ಷದ 82 ಸಾವಿರ ರೂಪಾಯಿ ಖರ್ಚಾಗಿದೆ. ನೀರಾವರಿ ಕಾಮಗಾರಿಗಳಿಗಾಗಿ ಸುಮಾರು ಒಂದು ಕೋಟಿ ರೂಪಾಯಿ ವರೆಗೆ ಖರ್ಚುಮಾಡಿದ್ದೇವೆ. ಜನಾಬ್ ಇಮಾಂರವರು ಮಾತನಾಡುವಾಗ ಕೆಲವು ವಿಷಯಗಳನ್ನು ಮರೆತರು. ಅವರು ಮಾತನಾಡುತ್ತಾ ನನ್ನ ವಿಚಾರವಾಗಿ, ಬಹಳ ಉತ್ಸಾಹಶಾಲಿಯಾಗಿ ಯೋಜನೆ ಹಾಕುವುದಾಗಿಯೂ, ಆದರೆ ಅದು ಸರಿಯಾಗಿ ನಡೆಯುವುದಿಲ್ಲವೆಂದೂ ಹೇಳಿದರು. ಈ ವಿಚಾರವಾಗಿ ನಾನು ಒಂದು ಮಾತನ್ನು ಬಹಳ ವಿಷಾದದಿಂದ ಹೇಳಬೇಕಾಗಿದೆ. ಅವರಿಗೆ ಈ ವಿಚಾರಗಳಲ್ಲಿ ಎಷ್ಟು ಅನುಭವವಿದೆಯೋ ನನಗೆ ಅಷ್ಟೂ ಇಲ್ಲ. ಹೀಗಿದ್ದರೂ ಅವರ ಸ್ಥಳದಲ್ಲೇ ಕೆಲವು ಕಾಮಗಾರಿಗಳನ್ನು ತೆಗೆದುಕೊಂಡರು. ಜಗಳೂರು ತಾಲ್ಲೂಕಿನಲ್ಲಿ ಮುತ್ತುಗದೂರು ಕೆರೆ, ಗಡಿಮಾಕುಂಟೆ, ಹೊಸ ಮಾಚನಹಳ್ಳಿ ಕೆರೆ, ಪರಶುರಾಮಪುರದಕೆರೆ, ಈ ಕಾಮಗಾರಿಗಳನ್ನು ಯಾರೇ ಆಗಲಿ ಲಾಭದಾಯಕವೆಂದು ಹೇಳುವುದಿಲ್ಲ. ಆದರೂ ಅವುಗಳನ್ನು ಅವರು ಕೈಗೆ ಕೊಂಡು ಪ್ರಾರಂಭಿಸಿದರು. ತೆಗೆದುಕೊಂಡ ಮೇಲೆ ಬೇಗಲಾದರೂ ಮುಗಿಸಿದರೆ? ಅದೂ ಇಲ್ಲ. ಅದರಿಂದಾದ ನಷ್ಟವೆಷ್ಟೆಂದರೆ, ಹಿಂದೆಮಾಡಿದ್ದ ಅಂದಾಜಿಗಿಂತ ಎಷ್ಟೋ ಹೆಚ್ಚು ಖರ್ಚುಮಾಡಬೇಕಾಗಿ ಬಂತು. ನಂಗೇನಹಳ್ಳಕೆರೆಗೆ 16,57,000 ರೂಪಾಯಿಗೆ ಅಂದಾಜಾಗಿದ್ದದ್ದು 20,62,000 ರೂಪಾಯಿಗೆ ರಿವೈಜ್ ಆಗಬೇಕಾಯಿತು, ಗಡಿಮಾಕುಂಟೆ ಕೆರೆಗೆ 2,85,000 ರೂಪಾಯಿಗೆ ಮಾಡಿದ್ದ ಅಂದಾಜು 7,98,000 ರೂಪಾಯಿಗೆ ರಿವೈಜ್ ಆಯಿತು; ತುಪ್ಪದಹಳ್ಳಕೆರೆಗೆ 3,64,000 ರೂಪಾಯಿಗೆ ಮಾಡಿದ್ದ ಅಂದಾಜು 9,83,000 ರೂಪಾಯಿಗೆ ರಿವೈಜ್ ಆಯಿತು.

Sri L. SIDDAPPA—What is the point?

ಶ್ರೀ ಟಿ. ಮರಿಯಪ್ಪನವರು.—ಹಿಡಿದ ಕೆಲಸವನ್ನು ಅವರು ಬೇಗ ಮುಗಿಸಿದ್ದಿದ್ದರೆ ಎಷ್ಟೋ ಹಣ ನಮಗೆ ಉಳಿತಾಯವಾಗುತ್ತಿತ್ತೆಂದು ತೋರಿಸಲು ಹೇಳುತ್ತಿದ್ದೇನೆ. ನಂಗೇನಹಳ್ಳಿ ಕೆರೆಯ ಹತ್ತಿರ ನಿಂತು ನೋಡಿದರೆ ಸುತ್ತಲೂ ಎಷ್ಟೋ ಮಣ್ಣುಗುಡ್ಡೆಗಳು ಕಾಣುತ್ತವೆ. ಅದನ್ನು ನೋಡಿದರೆ, ಪ್ರಯೋಗ ಪರೀಕ್ಷೆ ಮಾಡುವುದರಲ್ಲಿ ಎಷ್ಟೋ ಹಣ ಖರ್ಚಾಗಿದೆಯೆಂಬುದು ವ್ಯಕ್ತವಾಗುತ್ತದೆ.

Janab J. MAHOMED IMAM.—That is not correct.

ಶ್ರೀ ಎಲ್. ಸಿದ್ದಪ್ಪನವರು.—ಎರಡು ವರ್ಷಗಳಲ್ಲಿ ಅವರು ಮುಗಿಸಲಲ್ಲವೆಂದು ಹೇಳುವವರು ತಾವು ಬಂದು ಮೂರು ವರ್ಷಕಾಲವಾದರೂ ಏಕೆ ಆ ಕಾಮಗಾರಿಗಳನ್ನು ಮುಗಿಸಲಲ್ಲ?

ಶ್ರೀ ಟಿ. ಮರಿಯಪ್ಪನವರು.—ಎಷ್ಟೋ ತೊಂದರೆಗಳು ಬಂದವು. ಆದರೂ 1951ನೆಯ ಇಸವಿಯ ಜೂನ್ ಹೊತ್ತಿಗೆ ಮುಕ್ಕಾಲುಪಾಲು ಕೆಲಸಗಳೆಲ್ಲಾ ಮುಗಿದು ವ್ಯವಸಾಯಕ್ಕೆ ನೀರು ಕೊಡುತ್ತೇವೆಂದು ನಾನು ಭರವಸೆ ಕೊಡಬಲ್ಲೆ.

ಶ್ರೀ ಎಲ್. ಸಿದ್ದಪ್ಪನವರು.—ಅವುಗಳನ್ನು ಐದು ವರ್ಷಗಳಲ್ಲಿ ಮುಗಿಸಬೇಕೆಂಬ ಯೋಜನೆ ಇತ್ತು.

ಶ್ರೀ ಟಿ. ಮರಿಯಪ್ಪನವರು.—ಕೆಲವು ನಿಜವಾಗಿಯೂ ಬಹಳ ಲಾಭದಾಯಕ ಕೆಲಸಗಳು. ಕಣ್ವಾ ಜಲಾಶಯವನ್ನು ಉದಾಹರಣೆಗೆ ತೆಗೆದುಕೊಳ್ಳೋಣ. 9 ಲಕ್ಷ ರೂಪಾಯಿ ಖರ್ಚುಮಾಡುವ ಕೆರೆಯಿಂದ 5 ಸಾವಿರ ಎಕರೆ ಸಾಗುವಳಿಯಾಗುತ್ತದೆ. ಇದನ್ನು ಒಪ್ಪಿದ್ದೇವೆ. ಒಟ್ಟಿನಲ್ಲಿ ನಾನು ಇಷ್ಟು ಭರವಸೆಕೊಡಬಲ್ಲೆ. ದೊಡ್ಡ ನೀರಾವರಿ ಕಾಮಗಾರಿಗಳನ್ನೂ ಒಂದು 'ಪ್ಲಾನ್' ಪ್ರಕಾರ ಸಂಪೂರ್ಣಮಾಡುತ್ತೇವೆ. ಜನಾಬ್ ಇಮಾಂರವರು ಒಂದು ಮುಖ್ಯವಾದ ವಿಷಯ ಹೇಳಿದ್ದಾರೆ. ಅದೇನೆಂದರೆ ಲಕ್ಕವಳ್ಳಿ, ತುಂಗ ಮತ್ತು ನೂಗು ಯೋಜನೆಗಳನ್ನು ಕೈಬಿಡಬಾರದೆಂದು ಹೇಳಿದ್ದಾರೆ. ಈ ಸಲಹೆಯನ್ನು ನಾನು ಸ್ವಾಗತಿಸುತ್ತೇನೆ. ನಿಜವಾಗಿಯೂ ನಮ್ಮಲ್ಲಿ ಯಾರೂ ಲಕ್ಕವಳ್ಳಿ ಯೋಜನೆ ಅನಾವಶ್ಯಕವೆಂದು ಹೇಳಲಾರರು. ಅದು ಬಹಳ ಅವಶ್ಯಕವಾಗಿದೆ. ಆದರೆ ನಮ್ಮಲ್ಲಿ ಹಣದ ಅಭಾವದಿಂದ ಒಂದೇ ಸಾರಿ ಆ ಕಾಮಗಾರಿಯನ್ನು ಸಂಪೂರ್ಣವಾಗಿ ಮಾಡುವುದಕ್ಕೆ ಸಾಧ್ಯವಾಗದೇಯಿದ್ದರೆ ಹಂತ ಹಂತವಾಗಿ ಮಾಡಬೇಕೆಂದು ಯೋಚಿಸಿದ್ದೇವೆ. ಮೊದಲು ಅದನ್ನು 35 ಅಡಿ ಮಟ್ಟಕ್ಕೆ ತರಬೇಕೆಂದು ಮಾಡಿದ್ದೇವೆ. ಇದೇ ರೀತಿ ಅತ್ಯಾವಶ್ಯಕವಾದ ನೂಗು ಯೋಜನೆಯನ್ನು ಹಂತ ಹಂತವಾಗಿ ಮುಗಿಸಬೇಕೆಂದು ಮಾಡಿದ್ದೇವೆ. ಹೀಗೆ ಮಾಡಿದರೆ ನಷ್ಟವಾಗುವುದಿಲ್ಲವೆಂಬುದು ಪ್ರವೀಣರ ಅಭಿಪ್ರಾಯವಾಗಿದೆ. ಆದುದರಿಂದ ನಮ್ಮ ಮಿತ್ರರಾದ ಜನಾಬ್ ಇಮಾಂರವರು ಈ ವಿಚಾರದಲ್ಲಿ ಏನೂ ಚಿಂತೆಪಡಬೇಕಾಗಿಲ್ಲ. ಕೇಂದ್ರ ಸರ್ಕಾರದವರೂ ಕೂಡ ಈ ವಿಚಾರಗಳನ್ನು ಪರಿಶೀಲಿಸಿ ಹಣ ಸಹಾಯಮಾಡುವುದಾಗಿ ಒಪ್ಪಿದ್ದಾರೆ.

ಶ್ರೀ ಗುಂಡಪ್ಪಗೌಡರು ಗ್ರಾಮಾಭಿವೃದ್ಧಿಯೋಜನೆಯ ವಿಚಾರವಾಗಿ ಮಾತನಾಡಿ ಹಿಂದೆ ಇದ್ದ ಹೋಬಳಿ ಯೋಜನೆಯನ್ನೆ ಮುಂದುವರಿಸಬೇಕಾಗಿತ್ತೆಂದು ಹೇಳಿದರು. ಈಗ ನಡೆಯುತ್ತಿರುವುದರಲ್ಲಿ ಅಷ್ಟೇನೂ ವ್ಯತ್ಯಾಸಮಾಡಿಲ್ಲ. ಈ ಯೋಜನೆಗೆ ಸಂಬಂಧಪಟ್ಟ ಕೆಲಸ ಕಾರ್ಯಗಳು ದೇಶದ ಎಲ್ಲ ಭಾಗಗಳಲ್ಲಿಯೂ ಚೆನ್ನಾಗಿ ಹರಡಲೆಂಬ ಉದ್ದೇಶದಿಂದ ಹಿಂದೆ ಅಡ್ವೈಜರಿ ಸಮಿತಿಗಳೆಂದು ಮಾಡಿದ್ದುದಕ್ಕೆ ಬದಲು ಈಗ ಎಕ್ಸಿಕ್ಯೂಟಿವ್ ಸಮಿತಿಗಳನ್ನು ಏರ್ಪಾಡು ಮಾಡಿದ್ದೇವೆ. ಖಾನಗೀ ಜನರಿಗೆ ಸ್ವಲ್ಪ ಹೆಚ್ಚು ಹೆಚ್ಚಾಗಿ ಅಧಿಕಾರ ಕೊಟ್ಟರೆ ಅವರಲ್ಲಿ ಉತ್ಸಾಹ ಹುಟ್ಟುತ್ತದೆಂಬ ಉದ್ದೇಶದಿಂದ ತಾಲ್ಲೂಕು ಮತ್ತು ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಸಮಿತಿಗಳಿಗೆ ಸ್ವಲ್ಪ ಹೆಚ್ಚಿನ ಅಧಿಕಾರಗಳನ್ನು ಕೊಟ್ಟಿದ್ದೇವೆ. ಇದರ ಉದ್ದೇಶ local initiativeನ್ನು kindle ಮಾಡುವುದೇ ಆಗಿದೆ. ಹಿಂದೆ ಸರ್ ಮಿರ್ಜಾರವರ ಕಾಲದಲ್ಲಿ ಒಂದು ಯೋಜನೆಯನ್ನು ಮಾಡಿದ್ದರು. ಅದು ಸರಿಯಾಗಿ ಕೆಲಸ ಮಾಡಲಲ್ಲ, ಆಮೇಲೆ ಅದನ್ನು ಬದಲಾಯಿಸಿ ಹೋಬಳಿ ಯೋಜನೆಯನ್ನು ಮಾಡಿದರು. ಅದೂ ಅಷ್ಟು ಸಮರ್ಪಕವಾಗಿ ಕೆಲಸ ಮಾಡಿದ್ದರಿಂದ ನಾವು ಅದನ್ನು ಸ್ವಲ್ಪ ಬದಲಾವಣೆ ಮಾಡಬೇಕಾಯಿತು. ಹಿಂದೆ ಗ್ರಾಮ ಸುಧಾರಕರಾಗಿ ಚೆನ್ನಾಗಿ ಕೆಲಸ ಮಾಡಿರುವ ಅನೇಕರನ್ನು ಈಗ ಖಾಯಂ ನೌಕರರಾಗಿ ನೇಮಕ ಮಾಡಿದ್ದೇವೆ. ಖಾಸಗೀ ಜನರು ಖಾಯಂ ನೌಕರರಾಗಿದ್ದರೆ ಶಿಸ್ತು ಚೆನ್ನಾಗಿರುತ್ತದೆಂದು ಹೀಗೆ ಮಾಡಿದ್ದೇವೆ. ಈ ಗ್ರಾಮಾಭಿವೃದ್ಧಿ ಯೋಜನೆಯ ವಿಷಯದಲ್ಲಿ ನ್ಯಾಯವಿಧಾಯಕ ಸಭೆಯಲ್ಲಿಯೂ ಪ್ರಜಾ ಪ್ರತಿನಿಧಿ ಸಭೆಯಲ್ಲಿಯೂ

ಅನೇಕ ರಚನಾತ್ಮಕವಾದ ಟೀಕೆಗಳು ಬಂದು ಇದನ್ನು reorientate ಮಾಡಿದ್ದೇವೆ. ಈಗ ಏನೇನು ಕೆಲಸ ಕಾರ್ಯಗಳು ನಡೆಯಬೇಕೋ ಅವು ಸುಲಲಿತವಾಗಿ ನಡೆಯುತ್ತಿವೆ. ಹಳ್ಳಿಗಳ ರಸ್ತೆಗಳ ರಿಪೇರಿ, ಭಾವಿಗಳ ರಿಪೇರಿ ಮುಂತಾದ ಅನೇಕ ಕಾರ್ಯಗಳು ನಡೆಯುತ್ತಿವೆ. ಈ ವಿಷಯದಲ್ಲಿ ಸರ್ಕಾರದವರು ಮಾಡತಕ್ಕ ಪ್ರಯತ್ನದ ಜೊತೆಗೆ ಆಯಾ ಪ್ರದೇಶದ ಜನರಲ್ಲಿ ಉತ್ಸಾಹವಿಲ್ಲದೇ ಹೋದರೆ ಇದು ಮುಂದುವರಿಯುವುದು ಕಷ್ಟವೆಂದು ಹೇಳಬೇಕಾಗಿದೆ. ಆಯಾ ಸ್ಥಳೀಯ ಜನರಲ್ಲಿ ಉತ್ಸಾಹ ಮೂಡಬೇಕು. ಇದನ್ನು ಗಮನಿಸಿ, ಮೈಸೂರು ದೇಶವನ್ನು 716 ಸರ್ಕಲ್ಲುಗಳನ್ನಾಗಿ ವಿಂಗಡಿಸಿ ಒಂದೊಂದು ಸರ್ಕಲ್ಲಿಗೂ ರೂರಲ್ ಡೆವಲಪ್‌ಮೆಂಟ್ ಇನ್‌ಸ್ಪೆಕ್ಟರುಗಳೆಂದು ನೇಮಿಸಲು ಏರ್ಪಾಡು ಮಾಡಲಾಗಿದೆ, ರೆವೆನ್ಯೂ ಇನ್‌ಸ್ಪೆಕ್ಟರುಗಳೆಂದರೆ, they are the last link in the Governmental organization. ಅವರು ಖಾಯಂ ನೌಕರರಾಗಿ ಮೊದಲಿನಿಂದಲೂ ಇರುವುದರಿಂದ ರೆವೆನ್ಯೂ ಮತ್ತು ರೂರಲ್ ಡೆವಲಪ್‌ಮೆಂಟ್ ಎರಡು ಕೆಲಸಗಳನ್ನೂ ನೋಡಿಕೊಳ್ಳಬೇಕೆಂದು ಮಾಡಿದ್ದೇವೆ. ರೆವೆನ್ಯೂ ಇನ್‌ಸ್ಪೆಕ್ಟರ ಮಾತನ್ನು ಪಟೇಲ ಶಾನುಭೋಗರೂ ಕೇಳುತ್ತಾರೆ, ಕೆಲಸ ಸುಗಮವಾಗಿ ನಡೆಯುತ್ತದೆ ಎಂದು ಈ ರೀತಿ ಮಾಡಿದ್ದೇವೆ.

ಶ್ರೀ ಏಚ್. ಬಿ. ಗುಂಡಪ್ಪಗೌಡರು.—Non-official element ನ್ನು official ಆಗಿ ಮಾಡಿದ್ದೀರಿ. ಇದನ್ನು ನಾನು ಒಪ್ಪುವುದಿಲ್ಲ. ಖಾನಗೀ ಜನರಿಂದಲೇ ಕೆಲಸ ತೆಗೆದುಕೊಳ್ಳಬೇಕೆಂಬುದು ನನ್ನ ಅಭಿಪ್ರಾಯ.

ಶ್ರೀ ಟಿ. ಮರಿಯಪ್ಪನವರು.—ನಮ್ಮ ಶಾಸನ ಸಭೆಗಳಲ್ಲಿಯೇ ಖಾನಗೀ ಜನರಿದ್ದಾರೆ, ಕೆಲಸ ನಡೆಯುವುದು ಕಷ್ಟವೆಂದು ಟೀಕೆ ಬಂತು. ಅಲ್ಲದೆ ಪ್ಲಾನಿಂಗ್ ಕಮಿಷರ್ಷನವರು ಕೆಲವು ನಲಹೆಗಳನ್ನು ಕಳುಹಿಸಿದ್ದರು. ಅಧಿಕಾರ ವರ್ಗಕ್ಕೂ ಖಾನಗೀ ಜನರಿಗೂ ಸಂಬಂಧ ಕಲ್ಪಿಸಲು ಮಧ್ಯೆ ಈ ರೀತಿ ಜನರಿರಬೇಕು, ಅವರು ನೌಕರರಾಗಿರಬೇಕು ಎಂಬ ಅಭಿಪ್ರಾಯ ತಿಳಿಸಿದ್ದರು. ಇತರ ಇಲಾಖೆಗಳ ಅಧಿಕಾರಿಗಳೂ ಇವರೊಡನೆ ಸಹಕರಿಸಬೇಕು ಎಂದು ಅಭಿಪ್ರಾಯವನ್ನು ತಿಳಿಸಿದ್ದಾರೆ. ಹೀಗೆ ನಾವು ಏನು ಮಾಡಿದ್ದೇವೋ ಅದಕ್ಕೂ ಪ್ಲಾನಿಂಗ್ ಕಮಿಷರ್ಷನವರ ನಲಹೆಗಳಿಗೂ ಸರಿಹೊಂದುತ್ತವೆ. ರೂರಲ್ ಡೆವಲಪ್‌ಮೆಂಟ್ ಇಲಾಖೆಗೆ ಎಷ್ಟು ಹೆಚ್ಚು ಹಣ ಕೊಟ್ಟರೆ ಅಷ್ಟು ಹೆಚ್ಚಾಗಿ ಅಭಿವೃದ್ಧಿ ಕಾರ್ಯಗಳು ನಡೆಯುತ್ತವೆ. ಹೇರಳವಾಗಿ ಹಣ ಕೊಡಬೇಕಾದರೆ ಈಗ ಸಾಧ್ಯವಿಲ್ಲ. ಅಲ್ಲದೆ ಈ ಹೊಸ ಏರ್ಪಾಡು ಜಾರಿಗೆ ಬಂದದ್ದು ಸೆಪ್ಟೆಂಬರ್ 49ರಲ್ಲಿ, ಎಂದರೆ, ಇನ್ನೂ ಒಂದು ವರ್ಷವಾಗಿದೆ. ಇಷ್ಟರಲ್ಲಿ ನಮ್ಮ ದೇಶದಲ್ಲಿ ಸಮಗ್ರ ಸೇವಾ ಸಹಕಾರ ಸಂಘಗಳನ್ನು ಪ್ರಾರಂಭಮಾಡಿದೆವು. ಇವಕ್ಕೆ 26 ಲಕ್ಷ ರೂಪಾಯಿ ಷೇರು ಬಂಡವಾಳದ ಮೇಬಲಗು ಜನರಿಂದ ವಸೂಲಾಯಿತು. ಒಂದೊಂದು ಸರ್ಕಲ್ಲಿಗೂ ಒಂದೊಂದು ಹೋಬಳಿಗೂ ಒಂದೊಂದು ಸಂಘವನ್ನು ಮಾಡಿಕೊನೆಗೆ ಒಂದೊಂದು ಸಂಘವೂ ಕೂಡ it must become the centre of rural uplift ಎಂಬ ಉದ್ದೇಶದಿಂದ ಮಾಡಿದೆವು. ಈ ಸಂಘಗಳಿಂದ ಹಳ್ಳಿಯ ಜನರಲ್ಲಿ ಪರಸ್ಪರ ನಿಕಟವಾದ ಸಂಬಂಧ ಬೆಳೆಯಲು ಅವಕಾಶವಾಗುತ್ತದೆ. ಗ್ರಾಮಗಳ ಈ ಸಂಘಗಳಲ್ಲಿ ರೈತರು ಸೇರಿ ತಮ್ಮ ಪುರೋಭಿವೃದ್ಧಿಯ ವಿಚಾರವನ್ನು ಯೋಚಿಸಲು ಸಾಧಕವಾಗಲೆಂಬ ಉದ್ದೇಶವನ್ನಿಟ್ಟುಕೊಂಡು ಮಾಡಿದ್ದೇವೆ. ಈಗಲೇ ಅಲ್ಲಿ ದಿದ್ದರೆ ಇನ್ನು ಐದು ಅಥವಾ ಹತ್ತು ವರ್ಷಗಳಲ್ಲಾದರೂ ಈ ಸಂಘಗಳು ರೈತರ ಸ್ಥಿತಿಯನ್ನು ಉತ್ತಮಗೊಳಿಸಲು ಸಾಧನವಾಗಲೆಂಬ ಉದ್ದೇಶದಿಂದ ಮಾಡಲಾಗಿದೆ. Communism ಮತ್ತು Capitalism ಇವಕ್ಕೆ ಮಧ್ಯಮಾರ್ಗವೆಂದರೆ ಸಹಕಾರ ಮಾರ್ಗ. ಈ ಸಹಕಾರ ಸಂಘಗಳಿಗೆ ರೆವೆನ್ಯೂ ಇನ್‌ಸ್ಪೆಕ್ಟರು ex-officio ಸೆಕ್ರೆಟರಿಯಾಗಿ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ. ಇಲ್ಲಿಯವರೆಗೂ ಈ ಒಂದು ಏರ್ಪಾಡು ಮಾಡಿದ್ದಾರೆ. ಈಗ ಸೆಪ್ಟೆಂಬರ್ 1ನೇ ತಾರೀಖಿನಿಂದ ಈ ಎಲ್ಲಾ ಸೊಸೈಟಿಗಳೂ ಕೆಲಸ ಮಾಡುತ್ತಿವೆ. ಮಾರ್ಕೆಟಿಂಗ್ ಸೊಸೈಟಿ, ಮಲ್ಟಿ ಪರ್ಪಸ್ ಕೋ ಆಪರೇಟಿವ್ ಸೊಸೈಟಿಗಳನ್ನು ಏರ್ಪಾಡು ಮಾಡಿ ಎಷ್ಟು ದಿನ ಆಯಿತು ? 15–20 ವರ್ಷಗಳೇನೂ ಆಗಿಲ್ಲ. ರೂರಲ್ ಡೆವಲಪ್‌ಮೆಂಟ್ ಸ್ಕೀಂ ಯಾವತ್ತು ಪ್ರಾರಂಭವಾಯಿತೋ ಅದೇ ದಿನ ಇದೂ ಪ್ರಾರಂಭವಾಯಿತು. ಎಂದರೆ 13–4–1949ರಲ್ಲಿ ಪ್ರಾರಂಭವಾಯಿತು. ಈ ಸೊಸೈಟಿಗಳು ಬಹಳ ಚೆನ್ನಾಗಿ ಕೆಲಸ ಕಾರ್ಯ ಮಾಡಿ ರೈತರಿಗೆ ಬೀಜ, ಗೊಬ್ಬರ ಮತ್ತು ವ್ಯವಸಾಯದ ಮುಟ್ಟುಗಳನ್ನು ಹಂಚಿಕೆ ಮಾಡುತ್ತವೆ. ಈ ಒಂದು ಏರ್ಪಾಡು ಏರ್ಪಡಿಸಿದ್ದೇವೆ. ಇದರ ಕೆಲಸ ಕಾರ್ಯ ಪ್ರಾರಂಭವಾದದ್ದು ಹೋದ ವರ್ಷ ಸೆಪ್ಟೆಂಬರ್ 1 ರಿಂದ. ಆದ್ದರಿಂದ It is too early to judge. I want particularly the rural population to stand on their own legs. They must have the necessary initiative. They must come forward to run these institutions. ಈ ಸರ್ಕಾರದವರು ಈ ಒಂದು ಏರ್ಪಾಡನ್ನು ಏರ್ಪಾಡು ಮಾಡಿ ಬೆಂಬಲ ಕೊಡಬಲ್ಲರೇ ವಿನಾ ನಡೆಸಿಕೊಂಡು ಹೋಗತಕ್ಕ ದಕ್ಷತೆ, ಸರಿಯಾದ ಸೂಪರ್‌ವೈಜನೆ, ದೂರದೃಷ್ಟಿ, ರೈತಾಪಿ ಜನರಿಗೆ ಬರಬೇಕು. ಆದ್ದರಿಂದ ಗ್ರಾಮಾಭಿವೃದ್ಧಿಯ ಒಂದು ಅಂಗವಾಗಿ ಈ ಸಮಗ್ರ ಗ್ರಾಮ ಸೇವಾ ಸಹಕಾರ ಸಂಘಗಳನ್ನು ಸ್ಥಾಪಿಸಿರುವುದನ್ನು ಮಾನ್ಯ ಸದಸ್ಯರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ. ಕೇಂದ್ರದಿಂದಲೂ ಸಹ ಪಂಜಾಬರಾವ್ ದೇಶಮುಖ್‌ರವರು ಈ ವಿಷಯದಲ್ಲಿ ಸಲಹೆ ಕೊಟ್ಟಿದ್ದಾರೆ. ಆದ್ದರಿಂದ ಈ ವಿಚಾರದಲ್ಲಿ ಹೆಚ್ಚಾಗಿ ಹೇಳ ಬೇಕಾಗಿಲ್ಲ. ದಯವಿಟ್ಟು ಈ ಸಹಕಾರದ ಒಂದು ಚಳುವಳಿಗೆ ಎಲ್ಲರೂ ಪ್ರೋತ್ಸಾಹ ಕೊಡಬೇಕು.

ಇನ್ನೊಂದು ವಿಚಾರ. ಗಿಡಗಳನ್ನು ನೆಡುವ ವಿಚಾರದಲ್ಲಿ ಶ್ರೀ ಚನ್ನಬೈರೇಗೌಡರು ಮತ್ತು ಹುಚ್ಚೇಗೌಡರು ಹೆಚ್ಚು ಗಿಡಗಳನ್ನು ಹಾಕಲಲ್ಲವೆಂದು ಆಕ್ಷೇಪಣೆ ಮಾಡಿದರು.

ಶ್ರೀ ಬಿ. ಚೆನ್ನಬೈರೇಗೌಡರು.—ಹಾಕಿದ್ದೀರಿ; ಒಂದೂ ಬೆಳೆಯಲಲ್ಲ.

ಶ್ರೀ ಟಿ. ಮರಿಯಪ್ಪನವರು.—ಹೋದ ವರ್ಷ ವನ ಮಹೋತ್ಸವ ಮಾಡಿದಾಗ ನಾವು 1 ಲಕ್ಷ ಗಿಡ ಹಾಕಿದೆವು. ಅವರು ಏನೂ ಮಾಡಿಲ್ಲದೇ ಇರಬಹುದು.

Sri B. HUTCHE GOWDA.—I am sorry he should not make such remarks. How does he know that I have not planted trees ?

Sri T. MARIAPPA.—Very good ; if so, I am grateful to the Honourable Member. ಪ್ರಾಯಶಃ ಮಳೆ ಬಾರದೆ ಕೆಲವು ಕಡೆ

ಹಾಕಿರಬಹುದು. ಇನ್ನೂ ಹೆಚ್ಚಿಗೆ ಏನೂ ಹೇಳ ಬೇಕಾಗಿಲ್ಲ.

ಕೆಲವು ಸದಸ್ಯರು ಟ್ರಾಕ್ಟರ್ ವಿಚಾರ ಪ್ರಸ್ತಾಪ ಮಾಡಿದ್ದಾರೆ. ನಿಜ, ಟ್ರಾಕ್ಟರ್‌ಗಳಿಲ್ಲದೆ ಅನೇಕರಿಗೆ ಅನಾನುಕೂಲವಾಗಿದೆ. ಸ್ಪೇರ್ ಪಾರ್ಟ್ಸ್ ಸಿಕ್ಕುವು ದಿಲ್ಲ. ತರಪೇತಾದ ಡ್ರೈವರುಗಳ ಅಭಾವ, ಒಪ್ಪಿ ಕೊಳ್ಳುತ್ತೇನೆ. ಇದ್ದದ್ದರಲ್ಲಿ ಎಷ್ಟು ಮಟ್ಟಿಗೆ ಕೊಡ ಬಹುದೋ ಅಷ್ಟು ಕೊಡುತ್ತೇವೆ. ಇವತ್ತೇ ಅರ್ಜಿ ಹಾಕಿ ಬರಲಿಲ್ಲ ಎಂದು ಹೇಳಿದರೆ ಅದು ನಮ್ಮ ತಪ್ಪಲ್ಲ. ರೂರಲ್ ಡೆವಲಪ್‌ಮೆಂಟ್ ಸಮಿತಿ, ಡೆಪ್ಯುಟಿ ಕಮಿಷನರು ಮತ್ತು ಸಬ್‌ಡಿವಿಜನ್ ಆಫೀಸರು ಇವರೆಲ್ಲರಿಗೂ ಅದರ ಮೇಲೆ ಅಧಿಕಾರವಿದೆ. ಯಾವುದೋ ಒಂದು ಕಡೆ ನಾಲ್ಕು ಎಕರೆ ಜಮೀನಿದೆ, ಅದಕ್ಕೆ ಕೊಡಬೇಕೆಂದರೆ ಕೊಡುವುದಕ್ಕಾಗುವುದಿಲ್ಲ. ನಾಲ್ಕಾರು ಜನ ಸೇರಿಕೊಂಡು 200–250 ಎಕರೆಗೆ ಟ್ರಾಕ್ಟರ್ ಬೇಕೆಂದು ಕೇಳಿದರೆ ಕೊಡುವುದಕ್ಕೆ ಸಾಧ್ಯ. ಕೆಲಸವೂ ಆಗುತ್ತದೆ. 2–4–6 ಎಕರೆಗಳಿಗೆ ಕಳುಹಿಸಿ, ಎಷ್ಟೋ ದಿನ ಅವು ಅಲ್ಲೇ ನಿಂತುಹೋಗಿರತಕ್ಕ ನಿದರ್ಶನಗಳು ಅನೇಕವಿವೆ. ಆದ್ದರಿಂದ ಬುಲ್‌ಡೋಜರುಗಳ ಮತ್ತು ಟ್ರಾಕ್ಟರುಗಳ ವಿಚಾರದಲ್ಲಿ ಇತಕ್ಕ ಕಷ್ಟ, ಅನಿವಾರ್ಯಗಳನ್ನು ಸಭೆಯ ಮುಂದಿಟ್ಟಿದ್ದೇನೆ ಸೆಂಟ್ರಲ್ ವರ್ಕ್‌ಷಾಪ್ ಮಾಡುವುದಕ್ಕೆ ತೊಂದರೆಯಾಗಿದೆ, ಅಗತ್ಯವಾದ ಉಪ ಕರಣಗಳು ಬರುತ್ತಿಲ್ಲ. ಇದಕ್ಕೆ ಒಂದು ಉದಾಹರಣೆ ಹೇಳುತ್ತೇನೆ. ಹಿಂದೆ 1 ಲಕ್ಷ 40 ಸಾವಿರ ಗುದ್ದಲಿ ಗಳಿಗೆ ಆರ್ಡರ್ ಕೊಟ್ಟಿದ್ದರು. ಆದರ ಹೈಕೆ 24 ಸಾವಿರ ಮಾತ್ರ ಬಂದಿದೆ. 1947ರಲ್ಲಿ 12 ನಿಸ್ಸನ್ ಷೆಡ್ಡುಗಳು ಮತ್ತು ಜೀರೆ 12 ಷೆಡ್ಡುಗಳು—ಇವಕ್ಕೆ ಶ್ರೀ ಸಿದ್ಧಪ್ಪನವರ ಕಾಲದಲ್ಲಿ ಆರ್ಡರ್ ಕೊಟ್ಟಿ ದ್ದರು, ಇವತ್ತಿಗೂ ಬಂದಿಲ್ಲ. ಈಗ ಸುಮಾರು ಎರಡು ತಿಂಗಳಿನಿಂದ ದೆಹಲಿಯಿಂದ ತರಿಸಬೇಕೆಂದು ಏರ್ಪಾಡು ಮಾಡುತ್ತಾ ಇದ್ದೇವೆ. ಆದ್ದರಿಂದ ಕಾರ್ಯತಃ ಮಾಡು ವಾಗ ಎಷ್ಟೋ ಕಷ್ಟ ನಿಷ್ಠುರಗಳು ಬರುತ್ತವೆ. ಅದನ್ನು ಆರೋಜನೆ ಮಾಡಿದರೆ ಪ್ರಾಯಶಃ ಯಾರೂ ಟೀಕೆ ಮಾಡುವುದಿಲ್ಲ. ಇಷ್ಟು ಸಮಾಧಾನ ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗಲೇ ಈ ಚರ್ಚೆಯನ್ನು ಮುಕ್ತಾಯ ಮಾಡುತ್ತೀರೋ ಅಥವಾ ಫಲಾಹಾರವಾದ ನಂತರ ತೆಗೆದುಕೊಳ್ಳಬಹುದೋ ?

ಶ್ರೀ ಎಚ್. ಸಿ. ದಾಸಪ್ಪನವರು.—ಈಗಲೇ ಜಾಗ್ರತೆ ಮುಗಿಸಬಹುದು.

ಮುಷೀರ್-ಉಲ್-ಮುಲ್ಕ್ ಜನಾಬ್ ಜೆ. ಮಹಮದ್ ಇಮಾಂರವರು.—ಒಂದು ವಿಷಯ ಹೇಳಬೇಕಾಗಿದೆ. ಸಾಧಾರಣವಾಗಿ ಯಾವಾಗಲೂ ನಿರ್ಣಯವನ್ನು ಸೂಚಿ ಸುವವರಿಗೆ ಕೊನೆಯಲ್ಲಿ ಭಾಷಣಮಾಡಿದವರಿಗೆ ಪ್ರತ್ಯು ತ್ತರವನ್ನು ಹೇಳತಕ್ಕ ಒಂದು ಅವಕಾಶವಿದ್ದೇ ಇರು ತ್ತದೆ. ಈಗ ನನ್ನ ತಿದ್ದುಪಡಿಯ ಮೇಲೆ ಅನೇಕರು ಮಾತನಾಡಿರುವುದರಿಂದ ಆ ತಿದ್ದುಪಡಿಯನ್ನೇ ಒಂದು ಮೂಲ ಸೂಚನೆ (Substantive motion)ಯೆಂದು ಪರಿಗಣಿಸಿ ನನಗೂ ಪ್ರತ್ಯುತ್ತರ ರೂಪವಾಗಿ ಒಂದೆರಡು ಮಾತುಗಳನ್ನಾಡಲು ಅವಕಾಶ ಕೊಡಬೇಕೆಂದು ಕೋರುತ್ತೇನೆ. The Chair may use its discretion.

Sri T. SUBRAMANYA.—But I thought that Janab Mahomed Imam did not speak on his amendment at all. He simply placed it on the table.

Janab J. MAHOMED IMAM.—It is left to the discretion of the Chair, ನಾನೇನೋ ಮಾತನಾಡಲಿಲ್ಲ. ಆದರೂ ಎಲ್ಲರೂ ಅದರ ಮೇಲೆ ಮಾತನಾಡಿದ್ದಾರೆ.

ಅಧ್ಯಕ್ಷರು.—ಸದಸ್ಯರು ಒಪ್ಪುವುದಾದರೆ 4 ಘಂಟೆ ಯವರೆಗೂ ಕುಳಿತು ಈ ವಿಷಯವನ್ನು ಮುಗಿಸಿ ಉಪ ಹಾರಕ್ಕೆ ಏಳಬಹುದು.

(Hon'ble Members signified their assent to the suggestion)

ಶ್ರೀ ಕೆ. ಟಿ. ಭಾಷ್ಯಂಗಿಯವರು (ನ್ಯಾಯಾಂಗ ಸಚಿವರು).—ಮಾನ್ಯ ಅಧ್ಯಕ್ಷರೇ, ನಾನು 5 ನಿಮಿಷದಲ್ಲಿ ಒಂದೆರಡು ಮಾತುಗಳನ್ನು ಹೇಳಿ ಮುಗಿಸಿಬಿಡುತ್ತೇನೆ.

ವಿದ್ಯುಚ್ಛಕ್ತಿಯ ವಿಷಯವಾಗಿ ಜನಾಬ್ ಮಹಮ್ಮದ್ ಇಮಾಂರವರು ಒಂದು ಆಕ್ಷೇಪಣೆಯನ್ನೆತ್ತಿದ್ದರು. ಆಹಾ ರದ ಸ್ವಯಂ ಪರಿಪೂರ್ಣತೆಯನ್ನು ಸಾಧಿಸುವುದಕ್ಕೆ ಸಂಬಂಧಪಟ್ಟಂತೆ ವಿದ್ಯುಚ್ಛಕ್ತಿ ಇಲಾಖೆಯವರು ಹೆಚ್ಚಾಗಿ ಕೆಲಸ ಮಾಡಲಿಲ್ಲವೆಂದು ಅವರ ತಿದ್ದುಪಡಿ ಯಲ್ಲಿಯೂ ತಿಳಿಸಿದ್ದಾರೆ. ಆದರೆ ಅವರು ಮಾತನಾಡಿ ದ್ದೇನೋ ಬೇರೆ. ಭಾಷಣ ಮಾಡುವಾಗ ಬೇರೆ ಯಾವುದೋ ಕೆಲವು ವಿಚಾರಗಳನ್ನು ಹೇಳಿದರು. ಆದರೂ ನಾನು ಅವರು ಸೂಚಿಸಿದ ವಿದ್ಯುಚ್ಛಕ್ತಿ ವಿಚಾರವನ್ನು ಸ್ವಲ್ಪ ಮಟ್ಟಿಗೆ ಪ್ರಸ್ತಾಪ ಮಾಡುತ್ತೇನೆ. ಬಹುಶಃ ಆಹಾರ ಸ್ವಯಂ ಪರಿಪೂರ್ಣತೆಯ ಸಂಬಂಧದಲ್ಲಿ ನಾವು ಮಾಡಿರುವುದೆಲ್ಲಾ ಅವರ ಗಮನದಲ್ಲಿದಿಯೆಂದು ನಾನು ನಂಬಿದ್ದೇನೆ.

Sri T. SUBRAMANYA.—There is no amendment of Janab Mahomed Imam at all before the House, because he did not read that.

ಶ್ರೀ ಕೆ. ಟಿ. ಭಾಷ್ಯಂರವರು.—ಆದರೂ, ಅವರ ಅಭಿಪ್ರಾಯವನ್ನು ತಿಳಿದು ಸದಸ್ಯರ ಮನಸ್ಸಿನಲ್ಲಿ ಏನಾದರೂ ಅಭಿಪ್ರಾಯ ವ್ಯತ್ಯಾಸವಾಗಿದ್ದರೆ ಅದನ್ನು ಸರಿಪಡಿಸಬಹುದೆಂದು ಭಾವಿಸಿ ಈ ಒಂದೆರಡು ಮಾತು ಗಳನ್ನು ಹೇಳುತ್ತೇನೆ. ದೇಶದಲ್ಲಿ ಆಹಾರ ಪದಾರ್ಥ ಗಳ ಬೆಳೆವಣಿಗೆಯನ್ನು ಪ್ರೋತ್ಸಾಹ ಪಡಿಸಬೇಕೆಂಬ ಉದ್ದೇಶದಿಂದಲೇ ಹಿಂದೆ ವಿದ್ಯುಚ್ಛಕ್ತಿಯ ದರ ಯೂನಿಟ್ಟಿಗೆ ಒಂದಾಣೆ ಇದ್ದುದನ್ನು ನಾವು ಆರು ಕಾಸಿಗೆ ಇಳಿಸಿದ್ದೇವೆ. ಹಿಂದಿನ ಮಂತ್ರಿ-ಮಂಡಳವಿ ದ್ದಾಗ ಯೂನಿಟ್ಟಿಗೆ ಒಂದಾಣೆ ಮಾಡಿದ್ದನ್ನು ಆರ್ಥಾ ಣೆಗೆ ಇಳಿಸಿದ್ದು ಪ್ರೋತ್ಸಾಹವಲ್ಲವೇ ?

ಜನಾಬ್ ಜೆ. ಮಹಮ್ಮದ್ ಇಮಾಂರವರು.—A point of explanation, Sir. ಹಿಂದಿನ ಮಂತ್ರಿ ಗಳ ಕಾಲದಲ್ಲಿ ಒಂದಾಣೆ ಇದ್ದುದನ್ನು ಆರು ಕಾಸು ಮಾಡಿದ್ದೇವೆಂದು ಹೇಳಿದರು. 'Commercial crop'ಗೆ ಎಂದು ಹೇಳಿಬಿಟ್ಟು ಆರು ಕಾಸು ಇದ್ದುದನ್ನು ಎರಡಾಣೆ ಕಡೆಯೂ ಒಂದಾಣೆ ಮಾಡಿರುವುದು ಹಿಂದಿನ ಮಂತ್ರಿಗಳ ಕಾಲದಲ್ಲಲ್ಲ, ಈಗಿನ ಮಂತ್ರಿಗಳ ಕಾಲದಲ್ಲಿ!!

ಶ್ರೀ ಕೆ. ಟಿ. ಭಾಷ್ಯಂರವರು.—ದಯವಿಟ್ಟು ಕ್ಷಮಿಸ ಬೇಕು. ವಾಸ್ತವಿಕ ಅಂಶಗಳ ಮೇಲೆ ವ್ಯತ್ಯಾಸ ತಲೆ ದೋರಿದರೆ ಅದು ರಿಕಾರ್ಡುಗಳಿಂದ ಇತ್ಯರ್ಥವಾಗ ಬೇಕೇ ಹೊರತು ವಾಗ್ವಾದಗಳಿಂದ ಆಗುವುದಿಲ್ಲ. ಆದ್ದ ರಿಂದ ರಿಕಾರ್ಡ್‌ಗಳನ್ನು ನೋಡಿ ತಾವು ಜವಾಬು

ಕೊಟ್ಟರೆ ಒಳ್ಳೆಯದು. ಹಿಂದಿನ ಮಂತ್ರಿಗಳ ಕಾಲದಲ್ಲಿ ಒಂದಾಣಿ ದರವಿದ್ದುದನ್ನು ಈಚೆಗೆ ನಾವು ಆಹಾರ ಪದಾರ್ಥಗಳ ಬೆಳವಣಿಗೆಯನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ 6 ಕಾಸಿಗೆ ಇಳಿಸಿದೆವು. ಆದರೆ ಇದರಿಂದ ಯಾವಾಗ ಹೆಚ್ಚು ಹೆಚ್ಚಾಗಿ commercial crops ಆಗಿರುವ ಕಡಲೆಕಾಯಿ, ಹೊಗೆಸೊಪ್ಪು ಬೆಳೆಯಲು ಪ್ರಾರಂಭವಾಗಿ ಹೆಚ್ಚಾಗಿ ಹಣ ಸಂಪಾದನೆಯಾಗಲು ಯಾರಿಗೆ ಅವಕಾಶವಾಯಿತೋ ಅಂಥವರಿಂದ ಮಾತ್ರ ಒಂದಾಣಿ ತೆಗೆದುಕೊಳ್ಳಬೇಕೆಂದು ಮಾಡಿದ್ದೇವೆ. ಅದು ಬಿಟ್ಟು ಸಾಮಾನ್ಯವಾಗಿ ರಾಗಿ, ಭತ್ತ, ಮುಂತಾದುವುಗಳ ವಿಷಯದಲ್ಲಿ ಆರು ಕಾಸನ್ನೇ ತೆಗೆದುಕೊಳ್ಳುತ್ತಿದ್ದೇವೆ.

ಎರಡನೆಯದಾಗಿ ಹಿಂದೆ ವ್ಯವಸಾಯದ ಪಂಪುಗಳನ್ನು ಹಾಕಿಕೊಡಬೇಕಾದರೆ 'ಲೈನ್ ಮಿನಿಮಂ' ಎಂದು ಹೇಳಿ ಶೇಕಡ 5 ರಷ್ಟು ಹಣವನ್ನು ಕಟ್ಟಿಸಿಕೊಳ್ಳುತಿದ್ದರು. ಈಗ ಅದನ್ನು ಕೇಳುತ್ತಿಲ್ಲ ಅಲ್ಲವೆ ಪಂಪುಗಳನ್ನು ಕೊಂಡುಕೊಳ್ಳುವುದರಲ್ಲೂ ಕೂಡ 2,000 ರೂಪಾಯಿನ ಪಂಪನ್ನು ಹಾಕಿಸಿಕೊಳ್ಳಬೇಕಾದರೆ ಮೊದಲು 2,000 ರೂಪಾಯಿ ಕೊಡಬೇಕಾಗಿತ್ತು. ಅಂಥಾದ್ದನ್ನು ತಪ್ಪಿಸಿ, ಈಗ ಕೇವಲ 100 ರೂಪಾಯಿಗಳನ್ನು ಕೊಟ್ಟರೆ ಸಾಕು ಪಂಪು ಹಾಕಿಸಿ ಕೊಡುತ್ತೇವೆ ಯಾರು ಬೇಕಾದರೂ ಪಂಪು ಹಾಕಿ ಕೊಡಿ ಎಂದು ಕೇಳಿದರೆ ನಾವೇ ಹಾಕಿಸಿಕೊಟ್ಟು ಆದಕ್ಕೆ ತಗಲುವ ಮೊಬಲಗನ್ನು ಕಂತಿನಲ್ಲಿ ತೆಗೆದುಕೊಳ್ಳುತ್ತೇವೆ. ಇವೆಲ್ಲಾ ಪ್ರೋತ್ಸಾಹಗಳಲ್ಲವೇ ?

ಈಗ ಕೇವಲ 2–3 ವರ್ಷಗಳಲ್ಲಿ ಈ ಪ್ರಕಾರ ಮಾಡಿ 700 ಪಂಪುಗಳನ್ನು ಕೊಟ್ಟಿದ್ದೇವೆ. ಹಿಂದೆ 40—50 ವರ್ಷಗಳಿಂದ ಕೊಟ್ಟಿರುವುದು ಒಟ್ಟು 1,081 ಎನ್ನುವಾಗ ನಾವು ಆಹಾರ ಪಥಾರ್ಥಗಳ ವಿಷಯದಲ್ಲಿ ಪ್ರೋತ್ಸಾಹ ತೋರಿಸಿದ್ದೇವೆಯೇ ಅಥವಾ ನಿರ್ಲಕ್ಷ್ಯವಾಗಿದ್ದೇವೆಯೇ ? ಜವಾಬ್ ಇಮಾಂರವರೇ ಹೇಳಲಿ. ಇದರ ಸಹಾಯದಿಂದ 10,000 ಎಕರೆಗಳಷ್ಟು ಖುಷ್ಕಿ ಜಮೀನು ತರೀ ಆಗಲು ಸಹಾಯವಾಗಿದೆ. ಮೂರು ಪರ್ಸಾ ರಾಗಿ ಬೆಳೆಯುತ್ತಿದ್ದಕಡೆ 10 ಪಲ್ಲ ಬತ್ತ ಬೆಳೆಯಲು ಅವಕಾಶವಾಗಿದೆ. ಇಷ್ಟೇ ಅಲ್ಲದೆ, ಒಬ್ಬೊಬ್ಬರೆ ಪಂಪುಗಳನ್ನು ಹಾಕಿಸಿ ಕೊಳ್ಳುವುದು ಕಷ್ಟವೆಂದು ಭಾವಿಸಿದರೆ, ಹತ್ತಾರು ಜನರು ಸೇರಿ lift irrigation ಏರ್ಪಾಡು ಮಾಡಿಕೊಳ್ಳುವ ಅನುಕೂಲ ಮಾಡಿಕೊಟ್ಟು ಒಟ್ಟು ತಗಲುವ ಖರ್ಚಿನಲ್ಲಿ ದಾಮಾಷಾ ಮೇರೆಗೆತೆಗೆದ ಕೊಳ್ಳಬೇಕೆಂದು ಹೇಳಿ ನೀಲಸೋಗೆ, ಹರಿಹರ ಮುಂತಾ ಎರಡು ಮೂರು ಕಡೆ ವ್ಯವಸ್ಥೆ ಮಾಡಿ ಕೊಟ್ಟಿದ್ದೇವೆ. ಒಂದು ಕಡೆ 400 ಎಕರೆ, ಇನ್ನೊಂದು ಕಡೆ 200 ಎಕರೆ ಮಾಡಿದೆ.

ಹೀಗೆಯೇ ಇನ್ನೂ ಅನೇಕ ವಿಚಾರಗಳಲ್ಲಿ ಸಹಾಯ ಮಾಡುತ್ತಿದ್ದೇವೆ. ಮುಖ್ಯವಾಗಿ ಎಲ್ಲೆಲ್ಲಿ ವಿದ್ಯುಚ್ಛಕ್ತಿ ಕೊಡಬೇಕೆಂದು ಕೇಳುತ್ತಿದ್ದಾರೋ ಅಲ್ಲಗೆಲ್ಲಾ ಓಡಿಗಿಸುವ ಏರ್ಪಾಡು ಮಾಡಿದೆ. ಈ ಮೊದಲೇ ಒಂದು ಪ್ರತ್ಯೇಯ ಸಂಬಂಧದಲ್ಲಿ ಹೇಳಿದಹಾಗೆ ಈ ಸಂಬಂಧದಲ್ಲಿ 4 ಕೋಟಿ ರೂಪಾಯಿಗಳ ಒಂದು ಯೋಜನೆಯನ್ನಿಟ್ಟುಕೊಂಡಿದ್ದೇವೆ. ದುಡ್ಡಿನ ಅಭಾವದಿಂದ ಅದನ್ನು ಜಾರಿಗೆ ತರುವುದಕ್ಕಾಗಿಲ್ಲ. ನಮ್ಮ ಕೈಗೆ ಎಷ್ಟು ಬೇಗನೆ ವಿದ್ಯುಚ್ಛಕ್ತಿಯನ್ನು ಎಲ್ಲರಿಗೂ ಒದಗಿಸಬೇಕೆಂಬುದು ನಮ್ಮ ಅಭಿಪ್ರಾಯ. ಇದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡುತ್ತಿದ್ದೇವೆ. ಅನೇಕ ತೊಡಕುಗಳಿವೆಯೆಂಬುದನ್ನು ಹೇಳಬೇಕಾಗಿಲ್ಲ. ಸ್ಪೇರ್ ಪಾರ್ಟ್ಸ್‌ಗಳು ಇಷ್ಟುಲೇಟರ್‌ಗಳು, ತಂತಿಗಳು ಪರದೇಶಗಳಿಂದ ಬರ ತಕ್ಕುವು. ಅವರಿಂದ ತರಿಸಬೇಕಾದರೆ ಚೆನ್ನವನ್ನೇ ಕೊಟ್ಟು ತರಿಸಬೇಕು. ಬೆಳ್ಳಿ ಕೊಟ್ಟರೂ ಒಪ್ಪುವುದಿಲ್ಲ. ಇಷ್ಟೆಲ್ಲಾ ಮಾಡಿ ಕಷ್ಟ ಪಟ್ಟು ಕೆಲಸ ಮಾಡಿದರೂ ಜನಾಬ್ ಇಮಾಂರವರು ಒಂದು ಒಳ್ಳೆಯ ಮಾತನ್ನಾಡಲಿಲ್ಲವಲ್ಲಾ ಎಂದು ವಿಷಾದ ಪಡುತ್ತೇನೆ. ಆದರೂ ಒಂದು ವಿಧದಲ್ಲಿ ಅವರನ್ನು ವಂದಿಸಬೇಕು ಎಂದು ಕಾಣುತ್ತದೆ. ಅವರು ಹೀಗೆ ಟೀಕೆ ಮಾಡಿದ್ದರಿಂದ ತಾನೇ ಇಷ್ಟು ಜನರಿಗೂ ವಾಸ್ತವಾಂಶಗಳು ತಿಳಿವಳಿಕೆಗೆ ಬಂತು. ನಾನು ಇಷ್ಟು ವಿಷಯಗಳನ್ನು ಹೇಳಿದುದರ ಮೇಲೆ ಅವರಿಗೂ ಸಂತೋಷವಾಗಿದೆ. ನಾನು ಹಣವನ್ನು ಹೊಂದಿಸಿಕೊಳ್ಳುವುದರ ವಿಷಯದಲ್ಲಿ ನಾವು ಇಂಡಿಯಾ ಸರ್ಕಾರದವರನ್ನು ಸಾಲ ಕೊಡಬೇಕೆಂದು ಕೇಳಿದ್ದೇವೆ. ಜನಾಬ್ ಇಮಾಂರವರು ಈ ಸಂಬಂಧದಲ್ಲೇ ಟೀಕೆ ಮಾಡುತ್ತಾ 'ಏನು' ಬರುವುದಕ್ಕೆ ಮುಂಚೆಯೇ ಬೊಬ್ಬೆಯೆಬ್ಬಿಸಿಬಿಡುತ್ತಾರೆ" ಎಂದು ಹೇಳಿದರು. ಆದರೆ ಹೊನ್ನೆ ಮರದು ಯೋಜನೆ ಮೇಕೆದಾಟು ಯೋಜನೆ—ಇವೆಲ್ಲಾ ಒಂದೇ ರಾತ್ರಿ ಯೋಚನೆ ಮಾಡಿ ತೀರ್ಮಾನ ಮಾಡಿ ಬಿಡತಕ್ಕವುಗಳಲ್ಲ. ಇದರ ವಿಷಯದಲ್ಲಿ ಯೋಚನೆ ಮಾಡಿ ಸಾಧ್ಯಾಸಾಧ್ಯತೆಗಳ ಒಪ್ಪಿಗೆಯೂ ಇದೆಯೆಂಬುದನ್ನೂ ತೋರಿಸಿ ಅವರ ಪ್ರೋತ್ಸಾಹ ಬೆಂಬಲಗಳಿಂದ ಕೂಡಿ ಪ್ರಯತ್ನಮಡೆಸಿದರೆ ನಮಗೆ ಅನುಕೂಲವಾಗುತ್ತದೆಯೇ ಹೊರತು ಇಲ್ಲದಿದ್ದರೆ ಅಷ್ಟು ಸುಲಭವಾಗಿ ಆಗುವುದಿಲ್ಲ. ಜನರಿಗೂ ತಿಳಿವಳಿಕೆಕೊಟ್ಟು ಅವರಿಂದಲೂ ಆಗಬಹುದೆಂದೆನಿಸಿ ಕೊಂಡರೆ ಹತ್ತು ಜನರ ಸಹಾಯವೂ ಸಿಕ್ಕಿದಂತಾಗುತ್ತದೆ. ಇಂಥಾ ಯೋಜನೆಗಳಿಗೆಲ್ಲಾ ಹೆಚ್ಚು ಮೊಬಲಗುಗಳು ಬೇಕು. ಜನರ ಆಸೆ, ಜನರ ಆಕಾಂಕ್ಷೆ ಯಾವ ರೀತಿ ಇದೆಯೆಂದು ತಿಳಿಯಪಡಿಸುವುದು ಒಳ್ಳೆಯದಲ್ಲವೇ ?

A MEMBER.—Propagandal ?

ಶ್ರೀ ಕೆ. ಟಿ. ಭಾಷ್ಯಂರವರು—"Propagandaಎಂದು ಹೇಳುವುದಕ್ಕೆ ಬದಲಾಗಿ Publicity ಎಂಬ ಪದವನ್ನು ಉಪಯೋಗಿಸಿದ್ದರೆ ಚೆನ್ನಾಗಿತ್ತು. ಬಹುಶಃ ಅವರೂ ಅದೇ ಅರ್ಥದಲ್ಲೇ ಹೇಳಿದರೆಂದು ಕಾಣುತ್ತದೆ. ಅಂತೂ, ಸಾರ್ವಜನಿಕರಿಗೂ ತಿಳಿಸಿ ಅವರ ಸಹಕಾರವನ್ನೂ ಪಡೆಯುವುದು ಸೂಕ್ತವೆಂಬುದನ್ನು ಹೇಳಬೇಕಾಗಿಲ್ಲ. ಈಗಾಗಲೇ ಇಂಡಿಯಾ ಸರ್ಕಾರದವರು ಒಂದೆರಡು ಕೋಟಿ ರೂಪಾಯಿಗಳ ಸಾಲವನ್ನು ಬೇಕಾಗಿದ್ದರೆ ಕೊಡುತ್ತೇವೆಂದು ನಮಗೆ ಭರವಸೆಯನ್ನು ಇತ್ತಿದ್ದಾರೆ. ಆದರೆ ಅವರಿನ್ನೂ ನಮಗೆ ಹಣವನ್ನು ಕೊಟ್ಟಿಲ್ಲ. ಅವರು ಹಣವನ್ನು ಕೊಟ್ಟಮೇಲೆ ಕೈರಾದ ಮಟ್ಟಿಗೂ ಮತ್ತಷ್ಟು ಸಹಾಯಮಾಡಲು ಪ್ರಯತ್ನ ಪಡುತ್ತೇವೆ. ಸರ್ಕಾರದವರು ವಿದ್ಯುಚ್ಛಕ್ತಿ ಇಲಾಖೆಯವರಿಂದ ವ್ಯವಸಾಯಾಭಿವೃದ್ಧಿಗೆ ಹೆಚ್ಚಿನ ಸಹಾಯವನ್ನೊದಗಿಸಿ ತನ್ಮೂಲಕ ಹೆಚ್ಚು ಆಹಾರ ಬೆಳೆಯಬೇಕೆಂಬ ಯೋಜನೆಯ ಬಗ್ಗೆ ತಮ್ಮ ಸಹಕಾರ ನೀಡಲು ಸದಾ ಸಿದ್ಧರಾಗಿರುತ್ತಾರೆಂಬ ಭರವಸೆಯನ್ನು ತಮಗೆ ನೀಡಬಲ್ಲೆ.

Sri H. C. DASAPPA.—Mr. Speaker, Sir, the Government are greatly obliged to all Hon'ble Members who have participated in the debate on this motion and, I may say, more particularly the Hon'ble the Leader of the Opposition and such of the Members of the Opposition

who took part in the debate. This is the second time we have a debate on the Rajpramukh's Address, a convention which has been established since the new Constitution. It is fairly evident to all the members of the House now that it is an exceedingly useful part of the work of this House and I am glad it is being made very good use of by Hon'ble Members of this House. I feel that the House has fully taken note of the import of this particular part of the agenda and have taken up an attitude and adopted a tone which, I should say, on the whole has been fairly constructive.

I would confine my remarks to just a few subjects which pertain to my portfolios and also to those of my colleague, the Honourable Chief Minister. The first thing that I would like to refer to is the remark made by my Hon'ble friend Sri Huche Gowda that the Government has been adopting an attitude which would virtually liquidate the State itself. So many Departments have gone—the Income-tax, the Central Excise, Railways and so on—and if in addition to that, a few more revenue-yielding Departments should go away, then there would be nothing left and he felt very aggrieved that the integrity of the State that the Constituent Assembly of Mysore had resolved to maintain, has come to suffer a great deal at the hands of this Government. This is a remark which I cannot let go unchallenged. If Hon'ble Members had ever applied their minds and known through what crisis and difficult times the Indian States were passing during this period of transition when practically all the Indian States were in the melting pot, if they had only understood that practically all the States were being, I do not say liquidated but transformed into these unions, each one of them, losing its separate identity and integrity, if they had known that Mysore also was running the risk of that danger, they would then have been able to appreciate with what tact, sagacity and wisdom the Government have handled this very delicate and difficult situation. I do not want to claim anything extraordinary for this Government, but I do feel that the attitude this Government took up was one of fully understanding the implications of this new Republic that was going to be constituted, one that was fully consistent with the ideals and objectives that the All-India Constituent Assembly laid before itself, one which was in the sovereign interests of the State, the unity, the security, the strength and the solidarity of the State. Then it would be fairly evident that all the steps that we have taken right from the beginning, have been taken with the one sole objective of seeing that the integrity of the State was not impaired even to the slightest extent. I do not want to refer to any particular aspects of that attitude that we took up, but I think that has been fairly well known and there have been occasions when the Hon'ble Chief Minister has referred to it. The idea of financial integration, the readiness with which we fell in line with the All-India Constitution, all these things are fairly indicative of the fact that the Mysore Government took up the right attitude in order to further and foster this idea of maintaining the integrity of the State. And today of all the Indian States—leave alone Hyderabad and Kashmir—Mysore has maintained its integrity. That is a matter on which Hon'ble Members including those on the Opposition should feel very proud of and feel very glad about. I would therefore, like my Hon'ble friend Sri Huche Gowda who is unfortunately not here now, to be more appreciative of the position in the land and not to make remarks which seem a little out of the way and give a wrong impression to friends outside.

The next question that I would like to deal with is with regard to the financial position referred to by some of the Hon'ble Members. I do not think the House expects me to go into the details now at this rather late hour. But I would say this, that money is required for completing the incomplete works most of which were sponsored by the previous Government and launched by them. I have dealt with this in some detail in the past and I only say

this much now and nothing more. Money is required for them. Money is also required for some very essential new undertakings that this Government has taken up, like the fertilisers. On that also it is the previous Government that have moved and it was just in December 1948 that the Government of India revalidated the whole scheme. And I think this House or the previous House, *i.e.*, the Legislative Council has expressed its opinion in favour of it. And there are also things like the telephone industries in which we have taken a share of the capital. There are new things like electrical manufactures which we have got to take up if we want to forge ahead. His Highness was pleased to say that we were the earliest in the field and they are very necessary developments in the land. For all these, money is required and how are we going to find money for them ? There are some alternatives, as Janab Mahomed Imam himself said: either we must use the reserves and the securities that we have got or we must float a loan or we must borrow from the Centre. These are the only courses open to us. I must tell the House that we did make an attempt to get permission to float a loan—permission is required now from the Reserve Bank—and they have answered that it is not possible to grant permission just now.

But having regard to the situation, we have again written to them, to the Government of India, that that is the only way of financing these works so essential for the development of the country. I need not mention the other schemes, the irrigation schemes, which His Highness has referred to in his Address. So that is the only way. We must float a loan—and I can assure the House that the credit of the Government of Mysore stands so high that there will be no difficulty whatever in the loan being successful. We have again written to them that we must have the permission to float a loan for five crores of rupees. Recently, they have given permission to Madras, Bombay and Madhya Bharat and I see no reason why there should be any discrimination whatever against this State. I am fairly certain that we will be successful. If there is any difficulty for floating this loan, I am pretty sure that the Government of India will come to our aid. I may disclose for the information of this House that next Sunday morning myself and the Financial Secretary or another important officer will be flying to Hyderabad to meet the Secretary of States Ministry to discuss this very question which Janab Imam has dealt with.

Janab J. MAHOMED IMAM.— You said 'with Janab' ?

Sri H. C. DASAPPA.— No. I welcome his co-operation. Only this is not the occasion for it. I should say for the information of the House that the Government will spare no efforts to see that money is found for financing these works.

The other very important question that has been dealt with is the extension of Indian Administrative Service and the Indian Police Service to Mysore. It is now evident that we have accepted the general principle of extension. What has motivated the Government of Mysore to accept this principle of extension of the services ? I only say that it is the logical, the inevitable effect of not merely the attitude that we have adopted all along but also what is inherent in the situation. Being part of the Republic and there being a service for the Republic, the All-India Services, it would be peurile, indiscreet and profitless for us to say that we shall have nothing to do with the All-India Services. I am afraid that any such attitude would be impolitic and would rather invite troubles in our way. I therefore humbly submit that we were perfectly justified.

Rajamantrapravina H. B. GUNDAPPA GOWDA— Hassan District (General).— What is the trouble you would be inviting otherwise ?

Sri H. C. DASAPPA.—The trouble is fairly obvious. When the whole of India, all the Part A States and all the Part B States choose to adopt one line, and if we in Mysore alone were

to adopt a different line, you know what the consequences would be. Any way, one thing is certain, you cannot justify it before the bar of public opinion. That is obvious. I do not want to say anything else. That kind of attitude would be, wrong in my view. Let this also be seen, that while all other States have readily joined without duly considering what its effect would be on the services generally, we on the other hand have taken time to consider all these aspects and to see that the interests of the Civil Service and the Police Service in Mysore are fully safeguarded. Other than the fact of this mere acceptance of principle, namely, the number of people that have got to be lifted into Indian Administrative Service and the Police Service, the proportion of seats to be reserved for promotion to the Provincial or State Civil Service and the Police Service,—all these important questions, and equally so the question of ranking, their emoluments etc., are kept open. I think that is a matter on which any Government should have been congratulated. But I do not want that my Government should be congratulated. I do not want to be misunderstood when I say that nobody should go away with the idea that we are unmindful of the interests of our own Civil Services. I can assure you that the Hon'ble Home Minister of the Government of India, Sardar Vallabhai Patel has openly and publicly acknowledged the efficiency of the Mysore Civil Services. I therefore do not see any reason to think that the Central Government will view our representation with any hostility. On the other hand, I am sure they fully sympathise with the position we have taken.

Then, I will only say in passing a word or two about the remarks made in respect of the losses that the sugarcane growers have suffered. I do not think I should detain the House much longer on that question. The committee that has come into existence has been constituted with the fullest concurrence of the Visvesvaraya Canal Raiyats' Association. I must say that the terms of reference are so wide that there is in fact hardly anything that they cannot deal with, so far as it pertains to the question of some relief to the growers who have suffered. In this connection I quite appreciate the remark of my Hon'ble friend Sri V. S. Narayana Rao when he said: "You must also keep an eye on the repurcussions of such wholesale relief to people who suffered from drought." I do not think any Government, especially in its present financial condition, could be oblivious to that fact. I can assure Sri V. S. Narayana Rao that we will be able to take full cognisance of that fact.

There are one or two more matters with regard to the Rural Industrialization Scheme of Sir M. Visvesvaraya. I have got books here which will go round the floor of the House. There, they would be able to know the full implications of the scheme.

Sri T. MARIAPPA (Home Minister).—It is not an old scheme.

Sri H. C. DASAPPA.—It is the latest scheme which Sir M. Visvesvaraya has placed before us and it must be given a fair trial. The idea is not merely to develop a few industries here and there, but to inculcate a spirit of enterprise, drive and self-sufficiency and all those virtues which go to build up a whole nation. From time to time we have had one or the other plan. That has not been enough. All that we require is transforming a nation of inertia into a fully enterprising and progressive nation. It is only by developing virtues in individuals that we could progress. How are we going to do it unless we have a scheme like that? I think it is a very fine scheme. I think that even the Planning Commission at the Centre have welcomed it. They have written to us last week that they would like to be kept in touch with the progress of the work from time to time. It is no joke to collect funds from the two districts. We have already collected about two lakhs of rupees from persons at eight annas each. That is an achievement which is really very creditable. We have collected as much as two lakhs and it is possible that one more lakh may

be collected. Further, Sir, I do not wish to deal with it.

I am very thankful to the House for having accorded such a fine welcome and response to the Address and joined with Sri T. Subramanya in the motion he has placed before the House. I think Janab Mahomed Imam's purpose has been very well served by this debate and I hope Janab Mahomed Imam will see his way to withdraw his amendment to the motion and allow the main motion to be passed unanimously by the House.

Sri T. SUBRAMANYA (Tumkur District-General).--I do not propose to reply after the speeches of the Hon'ble Ministers. There is nothing for me to reply except to make a request to Janab Mahomed Imam that he may as well withdraw his amendment if he is convinced that all his arguments have been met by the Ministers and other Hon'ble speakers of this House. In fact, I was away when he moved the amendment. Probably I was in the lobby. I followed his speech. It was a general criticism of the Government policy; but he did not confine himself in particular to the amendment. Even now my impression is, he did not confine himself to the amendment. I hope he will kindly withdraw the amendment and allow the main motion to be passed unanimously.

Janab J. MAHOMED IMAM.—I press the amendment.

Mr. SPEAKER.—The question is:

"Substitute the full stop by a comma at the end of the motion and add the following words:—

'but regret that Your Highness's Ministers have not taken effective steps to maintain the progressive character of the State in spheres of irrigation, industrial, electrical, rural and other nation-building developments, to keep to schedule of reaching self-sufficiency in food, to utilise the waters of Krishnarajasagara in a proper and judicious way and to reduce the issue prices of food grains to be within the reach of comman man'."

The motion was negatived.

Mr. SPEAKER.—The question is:

"That an Address be presented to His Highness the Maharaja in the following terms.

"May it please Your Highness:—

We, the Members of the Mysore Legislative Assembly assembled in this Session, beg leave to thank Your Highness for the Address delivered to the Assembly."

The motion was adopted.

Mr. SPEAKER.—The House will now rise for lunch and re-assemble at 4-40 P.M.

The Assembly adjourned for Lunch at Ten Minutes past Four of the Clock and re-assembled at Forty Minutes past Four of the Clock, Mr. Speaker (Sri V. Venkatappa) in the Chair.

SPECIAL MOTION

Delimitation of Constituencies.

Mr. SPEAKER (Sri V. Venkatappa).—Sri K. T. Bhashyam will move the Special Motion *re.* Delimitation of Constituencies.

Sri K. T. BHASHYAM (Minister for Law and Labour).—Sir, I beg to move:

"That this House do now consider the question of Delimitation of Constituencies for the House of the People, the State Legislative Assembly and the State Legislative Council, the conduct of elections therein and other incidental matters."

ಸ್ವಾಮಿ, ಈಗಾಗಲೇ ಭಾರತದೇಶದ ರಾಜ್ಯಾಂಗ ಯಾವ ರೀತಿ ಇರಬೇಕೆಂಬುದನ್ನು ತೀರ್ಮಾನ ಮಾಡಿದ್ದಾರೆ. ಇದೇ ವರ್ಷ ಜನವರಿ 26ನೆಯ ತಾರೀಖಿನಿಂದ ಭಾರತದೇಶ ಸ್ವತಂತ್ರ ಸಂಸ್ಥಾನವಾಗಿ ಇಂಡಿಯನ್ ರಿಪಬ್ಲಿಕ್ ಆಗಿದೆ. ಇದರ ಆಡಳಿತ ಡೆಮೋಕ್ರಾಟಿಕ್ ರೆಸ್ಪಾನ್ಸಿಬಲ್ ಗವರ್ನಮೆಂಟ್ ಪದ್ಧತಿಯ ಮೇರೆಗೆ ನಡೆಯಬೇಕಾಗಿರುವುದರಿಂದ ಅದಕ್ಕನುಗುಣವಾಗಿ ಶಾಸನ ಸಭೆಗಳನ್ನು ರಚನೆ ಮಾಡಬೇಕೆಂಬುದಾಗಿ ರಾಜ್ಯಾಂಗದಲ್ಲಿ ಅಡಕವಾಗಿದೆ. ದೇಶದ ಪ್ರಜೆಗಳಿಂದ ಆಡಳಿತ ನಡೆಯಬೇಕೆಂಬ ತತ್ವದ ಮೇರೆ ಪ್ರಜೆಗಳಿಂದ ಚುನಾಯಿತರಾದವರೇ ಶಾಸನ ಸಭೆಗಳಲ್ಲಿದ್ದು ಅಂತಹ ಪ್ರಜಾಪ್ರತಿನಿಧಿಗಳ ನಂಬಿಕೆಯನ್ನು ಪಡೆದಿರುವವರೇ ಆಡಳಿತವನ್ನು ನಡೆಸಬೇಕೆಂಬ ತತ್ವದ ಮೇರೆ ರಾಜ್ಯಾಂಗರಚನೆಯಾಗಿದೆ. ಇಂತಹ ಶಾಸನ ಸಭೆಗಳು ಯಾವ ರೀತಿ ಇರಬೇಕೆಂಬ ವಿಚಾರವೂ ರಾಜ್ಯಾಂಗದಲ್ಲಿ ಅಡಕವಾಗಿದೆ. ನಮಗೆ ಸಂಬಂಧಪಟ್ಟಂತೆ ಹೇಳುವುದಾದರೆ, ಕೇಂದ್ರ ಸರ್ಕಾರದ ಪಾರ್ಲಮೆಂಟಿನಲ್ಲಿರುವಂತೆ ಕೌನ್ಸಿಲ್ ಆಫ್ ಸ್ಟೇಟ್ ಮತ್ತು ಹೌಸ್ ಆಫ್ ಪೀಪಲ್ ಎಂದು ಎರಡು ಸಭೆಗಳೂ ನಮ್ಮ ಸಂಸ್ಥಾನದಲ್ಲಿಯೂ ಶಾಸನಸಭೆಗಳು ಎರಡು ಇರಬಹುದಾಗಿದೆ. ಪ್ರಕೃತದಲ್ಲಿ ಈ ಶಾಸನ ಸಭೆಗಳ ಚುನಾವಣೆಗೆ

ಸಂಬಂಧಪಟ್ಟ ವಿಚಾರವನ್ನು ನಾವು ಪರ್ಯಾಲೋಚನೆ ಮಾಡಬೇಕಾಗಿದೆ. ಕೇಂದ್ರದ ಕೌನ್ಸಿಲ್ ಆಫ್ ಸ್ಟೇಟ್ ಸಭೆಯಲ್ಲಿ 250 ಮಂದಿ ಸದಸ್ಯರಿರಬೇಕು, ಅವರಲ್ಲಿ 238 ಜನರು ಚುನಾಯಿತರಾದವರು ಮತ್ತು 12 ಜನರು ಪ್ರೆಸಿಡೆಂಟರವರಿಂದ ನಿಯಮಿತರಾದವರು. ಚುನಾಯಿತರಾಗುವ 238 ಮಂದಿ ಸದಸ್ಯರು ಸಂಸ್ಥಾನಗಳ ಶಾಸನ ಸಭೆಗಳ ಚುನಾಯಿತ ಸದಸ್ಯರಿಂದ ಚುನಾಯಿತರಾಗತಕ್ಕವರು. ಹೀಗೆ ಚುನಾಯಿತರಾಗುವುದು ಯಾವ ರೀತಿ ಎಂಬುದು ಶಾಸನದಲ್ಲೇ ಅಡಕವಾಗಿದೆ. ಸಂಸ್ಥಾನದ ಶಾಸನ ಸಭೆಗಳೇ ಆ ಸದಸ್ಯರನ್ನು ಚುನಾಯಿಸತಕ್ಕದ್ದೆಂಬುದೂ ತೀರ್ಮಾನವಾಗಿದೆ. ಆದಕಾರಣ ಕೌನ್ಸಿಲ್ ಆಫ್ ಸ್ಟೇಟ್ ವಿಚಾರದಲ್ಲಿ ನಾವು ಚುನಾವಣಾ ಕ್ಷೇತ್ರ ವಿಭಜನೆಯ ವಿಚಾರ ಹೇಳಬೇಕಾದ ಅವಶ್ಯಕತೆಯೇ ಇಲ್ಲ.

House of the Peopleನಲ್ಲಿ 500 ಜನ ಸದಸ್ಯರಿರಬೇಕೆಂದು ವಿಧಾಯಕವಾಗಿದೆ. ಒಂದೊಂದು ಸಂಸ್ಥಾನದಿಂದಲೂ ಗೊತ್ತುಮಾಡಲ್ಪಟ್ಟಿರುವ ಸಂಖ್ಯೆ ಪ್ರತಿನಿಧಿಗಳು ಚುನಾಯಿತರಾಗಿ ಬರತಕ್ಕದೆಂದು ವಿಧಾಯಕವಾಗಿದೆ. ಈ ಸಂಖ್ಯೆಯನ್ನು ಗೊತ್ತುಮಾಡಿ ಒಂದು ಪಟ್ಟಿಯನ್ನು ತಯಾರಿಸುವ ಅಧಿಕಾರವನ್ನು ಪ್ರೆಸಿಡೆಂಟರಿಗೆ ಕೊಟ್ಟಿದೆ. ಅದಕ್ಕನುಸಾರವಾಗಿ ಅವರು ಒಂದು ಆಜ್ಞೆ ಮಾಡಿದ್ದಾರೆ. ಅದರ ಪ್ರಕಾರ ನಮ್ಮ ಸಂಸ್ಥಾನದಿಂದ 11 ಜನ ಪ್ರತಿನಿಧಿಗಳನ್ನು ಅಲ್ಲಿಗೆ ಚುನಾಯಿಸಿ ಕಳುಹಿಸಬಹುದೆಂದು ಮಾಡಿದ್ದಾರೆ. ಲೆಕ್ಕದ ಪ್ರಕಾರ 5 ಲಕ್ಷದಿಂದ 7½ ಲಕ್ಷ ಪ್ರಜೆಗಳಿಗೆ ಒಬ್ಬರು ಪ್ರತಿನಿಧಿಯಂತಾಗುತ್ತದೆ. ಇದಕ್ಕೆ ನಮ್ಮ ಮೈಸೂರು ಸಂಸ್ಥಾನದಲ್ಲಿ ಚುನಾವಣಾ ಕ್ಷೇತ್ರ ವಿಭಜನೆಯನ್ನು ಯಾವ ರೀತಿ ಮಾಡಬೇಕೆಂಬುದನ್ನು ಈಗ ಆಲೋಚನೆ ಮಾಡಬೇಕಾಗಿದೆ. ಹೀಗೆಯೇ ನಮ್ಮ ಸಂಸ್ಥಾನದ ಲೆಜಿಸ್ಲೆಟಿವ್ ಅಸೆಂಬ್ಲಿ ಸಭೆಗೂ 99 ಜನ ಸದಸ್ಯರಿರಬಹುದೆಂದು ತೀರ್ಮಾನ ಮಾಡಿದ್ದಾರೆ. ಈ 99 ಜನರನ್ನು ಚುನಾಯಿಸುವುದಕ್ಕೂ ಯಾವ ರೀತಿ ಕ್ಷೇತ್ರ ವಿಭಜನೆಯಾಗಬೇಕೆಂಬುದನ್ನು ನಾವು ಯೋಚಿಸಬೇಕಾಗಿದೆ. ನಮ್ಮ ದೇಶದ ಪ್ರಜೆಗಳೆಲ್ಲ ಸೇರಿ ಈ ಪ್ರತಿನಿಧಿಗಳನ್ನು ಚುನಾಯಿಸಬೇಕಾಗಿದೆ. ಇಂತಿಂಥ ಕ್ಷೇತ್ರದಿಂದ ಇಪ್ಪತ್ತು ಜನರನ್ನು ಆರಿಸಬೇಕೆಂಬುದನ್ನು, ಕ್ಷೇತ್ರಗಳು ಹೀಗೆ ಹೀಗೆ ಇರಬೇಕೆಂಬುದನ್ನು ತೀರ್ಮಾನಿಸಬೇಕಾಗಿದೆ. ಇದರಲ್ಲಿ single-member constituency ಅಥವಾ multi-member constituency ಎಂಬ ಪ್ರಶ್ನೆ ಬೇರೆ ಇದೆ. ಅದನ್ನು ಆಮೇಲೆ ಹೇಳುತ್ತೇನೆ.

ಎರಡು ಶಾಸನ ಸಭೆಗಳಲ್ಲಿಯೂ ಷೆಡ್ಯೂರ್ಡ್ ಕೋಮಿನವರಿಗೆ ಕೆಲವು ಸ್ಥಾನಗಳನ್ನು ಮೀಸಲಾಗಿಡಬೇಕೆಂದು ವಿಧಾಯಕ ಮಾಡಿದ್ದಾರೆ. ಇದಕ್ಕೆ ಕಾರಣವೇನೆಂದರೆ ಸಾಮಾನ್ಯ ಚುನಾವಣೆಗಳಲ್ಲಿ ಹಿಂದುಳಿದ ಕೋಮಿನವರಿಗೆ ಚುನಾಯಿತರಾಗಿ ಬರಲು ಅವಕಾಶವಿಲ್ಲದೇ ಇರಬಹುದೆಂದು, ಇನ್ನು ಹತ್ತು ವರ್ಷಗಳವರೆಗಾದರೂ ಈ ರೀತಿ ಮೀಸಲಾಗಿಟ್ಟು ಅವರ ಅಭಿಪ್ರಾಯಗಳನ್ನೂ ಪ್ರತಿಪಾದಿಸತಕ್ಕವರು ಶಾಸನ ಸಭೆಯಲ್ಲಿರಬೇಕೆಂಬ ಉದ್ದೇಶದಿಂದ ಮಾಡಿದ್ದಾರೆ. ಇದಕ್ಕೆ ಸಂಬಂಧಪಟ್ಟ ನಿಯಮದ ಪ್ರಕಾರ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಗೆ ಷೆಡ್ಯೂರ್ಡ್ ಪಂಗಡದವರ ಪ್ರಜಾಸಂಖ್ಯೆ ಯಾವ ಪ್ರಮಾಣದಲ್ಲಿರುತ್ತದೆಯೋ ಅದಕ್ಕನುಗುಣವಾಗಿ ಅದೇ ಪ್ರಮಾಣದಲ್ಲಿ 99 ಜನ ಸದಸ್ಯರಿರುವ ಸಭೆಯಲ್ಲಿ ಷೆಡ್ಯೂರ್ಡ್ ಪಂಗಡದವರಿಗೆ ಸ್ಥಾನಗಳನ್ನು ಮೀಸಲಾಗಿಡಬೇಕು. ನಮ್ಮ ಸಂಸ್ಥಾನದ ಪ್ರಜಾಸಂಖ್ಯೆ 80·6 ಲಕ್ಷವೆಂದು ಪ್ರೆಸಿಡೆಂಟರವರು ತೀರ್ಮಾನ ಮಾಡಿ ಆಜ್ಞೆ ಹೊರಡಿಸಿದ್ದಾರೆ. ಇದು 1941ನೆಯ ಇಸವಿಯ ಸೆನ್ಸಸ್ ಆಧಾರದ ಮೇಲೆ ಲೆಕ್ಕ ಹಾಕಲ್ಪಟ್ಟಿದೆ. ಆಗ ಸಂಸ್ಥಾನದ ಒಟ್ಟು ಪ್ರಜಾಸಂಖ್ಯೆಯಲ್ಲಿ ಷೆಡ್ಯೂರ್ಡ್ ಪಂಗಡಗಳ ಪ್ರಜಾಸಂಖ್ಯೆ ಸೇಕಡ 19·1ರಷ್ಟಿತ್ತು. ಎಂದರೆ ಅವರ ಪ್ರಜಾಸಂಖ್ಯೆ 15·6 ಅಥವಾ 15·7 ಲಕ್ಷವಾಗುತ್ತದೆ. ಅದೇ ದಾಮಾಷಾವನ್ನಿಟ್ಟುಕೊಂಡು ಅವರಿಗಾಗಿ 19 ಸ್ಥಾನಗಳನ್ನು ಈ ಸಭೆಯಲ್ಲಿಯೂ ಎರಡು ಸ್ಥಾನಗಳನ್ನು ಹೌಸ್ ಆಫ್ ದಿ ಪೀಪಲ್‌ನಲ್ಲಿಯೂ ಮೀಸಲಾಗಿಡಬೇಕಾಗುತ್ತದೆ. ಎಂದರೆ, ಸಭೆಯಲ್ಲಿರಬೇಕಾದ 99 ಜನ ಸದಸ್ಯರಲ್ಲಿ 80 ಜನರಲ್ ಸ್ಥಾನಗಳೂ 19 ಷೆಡ್ಯೂರ್ಡ್ ಪಂಗಡದವರ ಸ್ಥಾನಗಳೂ ಇರುತ್ತವೆ.

ಇನ್ನು ಯಾರು ಓಟು ಕೊಡುವುದು ಎಂಬ ವಿಷಯವೂ ಸಹ ರಾಜ್ಯಾಂಗದಲ್ಲೇ ಅಡಕವಾಗಿದೆ. ಅದರಂತೆ ವಯಸ್ಕರ ಮತದಾನ ಪದ್ಧತಿಯಿರಬೇಕೆಂದು ಗೊತ್ತಾಗಿದೆ. ವಯಸ್ಕರೆಂದರೆ, 21 ವರ್ಷ ವಯಸ್ಸು ಮೀರಿರುವ ಇಂಡಿಯಾ ದೇಶದ ಪ್ರಜೆಗಳೆಲ್ಲರೂ ಓಟುದಾರರಾಗುತ್ತಾರೆ. ಎಲ್ಲರೂ ಓಟು ಮಾಡಬಹುದು ಎಂಬುದಾಗಿ ತೀರ್ಮಾನ ಮಾಡಿದ್ದಾರೆ. ಇದು ಒಂದು ದೊಡ್ಡ ಪ್ರಯೋಗ. ಲಿಮಿಟೆಡ್ ಫ್ರಾಂಚೈಸ್‌ನಲ್ಲೇ ಎಷ್ಟೋ ಅನಕ್ಷರಸ್ಥ ಓಟುರುಗಳಿದ್ದರು. ಆಗಲೇ ಕಷ್ಟವಾಗಿತ್ತು. ಅದರಲ್ಲಿ ನಮ್ಮ ದೇಶದ ಜನಗಳಲ್ಲಿ ಶೇಕಡ 10 ಭಾಗ ಓಟುದಾರರಾಗಬಹುದು. ಬಾಕಿ ದೇಶಗಳಲ್ಲಿ ಶೇಕಡ 15 ಭಾಗ ಆಗಬಹುದೆಂದು ಇತ್ತು. ಈಗ ನಮ್ಮ ದೇಶದ ಜನಸಂಖ್ಯೆ 80·6 ಲಕ್ಷ. ಅದರ ಪೈಕಿ ಸುಮಾರು 38 ಲಕ್ಷ ಓಟುರುಗಳಿದ್ದಾರೆ. ಅವರೆಲ್ಲರೂ ಯಾವ ರೀತಿ ಓಟು ಮಾಡಬೇಕು, ಯಾವಯಾವ ಕ್ಷೇತ್ರಗಳನ್ನು ವಿಭಜನೆ ಮಾಡಬೇಕು ಎಂಬುದನ್ನು ತೀರ್ಮಾನ ಮಾಡುವುದರಲ್ಲಿ ಬಹಳ ಪ್ರಾಮುಖ್ಯತೆ ಇದೆ. ಏಕೆಂದರೆ, ಈಗಿನ ಸರ್ಕಾರದ ಪದ್ಧತಿ ಪ್ರಜಾಪ್ರಭುತ್ವ ಪದ್ಧತಿ ಎಂದು ತೀರ್ಮಾನ ಮಾಡಿದ್ದೇವೆ. ಇದು ಸುಸೂತ್ರವಾಗಿ, ಸುಲಲಿತವಾಗಿ ಕೆಲಸ ಮಾಡಬೇಕಾದರೆ ಇದಕ್ಕನುಗುಣವಾಗಿರತಕ್ಕ ಪದ್ಧತಿಯನ್ನು ಅನುಸರಿಸಿದರೆ ಆಗುತ್ತದೆಯೇ ವಿನಾ ತಿಳುವಳಿಕೆಗೆ ಬಾರದೇ ಇರತಕ್ಕ ಅಥವಾ ಕಷ್ಟತರವಾದ ಒಂದು ಯೋಜನೆಯನ್ನು ನಾವು ತೀರ್ಮಾನ ಮಾಡಿದರೆ ಅದು ಕಾರ್ಯಗತವಾಗುವುದಿಲ್ಲ. ಉದಾಹರಣೆ ಹೇಳುವುದಾದರೆ ಸಿಂಗಲ್ ಟ್ರಾನ್ಸ್‌ಫರ್‌ಬಲ್ ಓಟ್ ಎಂಬುದಾಗಿ ಇದೆ. ಅದರ ಪ್ರಕಾರ ನಾಲ್ಕಾರು ಉಮೇದುವಾರರನ್ನು ಚುನಾಯಿಸಬೇಕಾದರೆ ಪ್ರಿಫರೆನ್ಸ್ 1, 2, 3 ಎಂಬುದಾಗಿ ಹಾಕಿ, ಲೆಕ್ಕಾಚಾರಮಾಡಿ ಫಸ್ಟ್ ಪ್ರಿಫರೆನ್ಸ್ ಎಷ್ಟು ಮಂದಿಗೆ ಕೊಡಬೇಕು, ಸೆಕೆಂಡ್ ಪ್ರಿಫರೆನ್ಸ್ ಎಷ್ಟುಮಂದಿಗೆ ಕೊಡಬೇಕು ಎಂಬುದನ್ನೆಲ್ಲ ನೋಡಿಕೊಂಡು ಕಡೆಗೆ ಯಾರು ಚುನಾಯಿತರಾದರು ಎಂದು ಹೇಳುವುದು ಒಂದು ಪದ್ಧತಿ. ಇದು ಸಾಧಾರಣ ಜನರಿಗೆ ಸುಲಭವಾಗಿ ಅರ್ಥವಾಗುವುದಿಲ್ಲ. ಈ ರೀತಿ ಬಹಳ ಕಷ್ಟವಾಗಿರುವಂತಹ ಪದ್ಧತಿಯನ್ನು ಜಾರಿಗೆ ತಂದರೆ ಓಟು ಮಾಡುವುದೇ ಕಷ್ಟವಾಗುತ್ತೆ. ಆದಕಾರಣ ಈ ವಿಚಾರಗಳನ್ನು ನಾವು ಬಹಳ ತೀವ್ರವಾಗಿ ಆಲೋಚನೆ ಮಾಡಿ ಯಾವ ಪದ್ಧತಿ ಸುಲಭವಾಗಿ ಅರ್ಥವಾಗತಕ್ಕದ್ದೋ, ಯಾವುದು ಸುಲಭವಾಗಿ ಕಾರ್ಯಾಚರಣೆಗೆ ತರಬಹುದೋ ಅದನ್ನು ಜಾರಿಗೆ ತರಬೇಕು. ಅನೇಕ ತರಹ ಪದ್ಧತಿಗಳಿವೆ. ಮೊದಲನೆಯದಾಗಿ ನಾವು ಈ ಅಸೆಂಬ್ಲಿಯ 99 ಜನಗಳಿಗೆ ಓಟು ಮಾಡಬಹುದು. ಅದನ್ನು ಯಾವರೀತಿ ಮಾಡೋಣವೆಂದರೆ, ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಎಂದು ಮಾಡಬಹುದು. ಹಾಗಾದರೆ ಪ್ರತಿಯೊಂದು

ಕ್ಷೇತ್ರವನ್ನೂ ಅಲಾಯಿದ ಮಾಡಿ ಆಯಾಯ ಕ್ಷೇತ್ರದಿಂದ ಒಬ್ಬೊಬ್ಬ ಪ್ರತಿನಿಧಿ ಬರಬಹುದು. ಆ ಕ್ಷೇತ್ರದಿಂದ ನಾಲ್ಕಾಳು ಜನ ಸ್ಪರ್ಧಿನಬಹುದು. ಯಾರಿಗೆ ಹೆಚ್ಚು ಓಟು ಬರುತ್ತದೆಯೋ ಅವರನ್ನು ಚುನಾಯಿನಬಹುದು. ಹೀಗೆ 99 ಕ್ಷೇತ್ರ ಮಾಡಬಹುದು. ಅದರಲ್ಲಿ 19 ಕ್ಷೇತ್ರ ರಿಸರ್ವ್ ಮಾಡಬೇಕಾಗುತ್ತದೆ. ಆದಕಾರಣ 61 ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ, 19 ಡಬ್ಬಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಎಂದರೆ 19×2=38, 61+38=99 ಆದ ಹಾಗಾಯಿತು. ಆ ರೀತಿ ಮಾಡಬಹುದು. ಅಥವಾ ಜನರಲ್ ಕ್ಯಾಸ್ಟ್‌ಗೆ 5-6 ಕಾನ್ಸ್ಟಿಟ್ಯುಯೆನ್ಸಿ ಒಟ್ಟಿಗೆ ಸೇರಿಸಿ ಬಿಟ್ಟು, ಷೆಡ್ಯೂಲ್ ಕ್ಯಾಸ್ಟ್‌ಗೆ 19 ಕಾನ್ಸ್ಟಿಟ್ಯುಯೆನ್ಸಿ ಮಾಡ ಬಹುದು. ಆ 19ರಿಂದಲೂ ಷೆಡ್ಯೂಲ್‌ಕ್ಯಾಸ್ಟ್‌ನವರು ಬರ ಬಹುದು ಮತ್ತೆ ಬಾಕಿ 80 ಜನರು ಜನರಲ್ ರೆಪ್ರಸೆಂಟೇ ಟೀವ್ಸ್ ಆಗಿ ಬರಬಹುದು. ಆ ರೀತಿ ಮಾಡಬಹುದು. ಇದ ರಲ್ಲಿ ಯಾವುದು ಸೂಕ್ತ ಎಂಬುದನ್ನು ನಾವು ಆಲೋಚನೆ ಮಾಡಬೇಕು. ಸರ್ವೇ ಸಾಧಾರಣವಾಗಿ ಇತ್ತೀಚೆಗೆ ನೋಡಿದ್ದರಲ್ಲಿ ಎಲ್ಲಾಕಡೆಯೂ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸೀನೇ ಹೆಚ್ಚಾಗಿ ಅಪೇಕ್ಷಿಸುತ್ತಾರೆ ಮತ್ತು ಕಾರ್ಯಾಚರಣೆಗೆ ತರುತ್ತಾ ಇದ್ದಾರೆ. ಉದಾಹರಣೆಗೆ ಅಮೇರಿಕಾ ಮತ್ತು ಇಂಗ್ಲೆಂಡಿನಲ್ಲಿ ಇದೇ ಪದ್ಧತಿ ಜಾರಿಯಲ್ಲದೆ.

Rajamantrapravina H. B. GUNDAPPA GOWDA (Hassan District–General).— Not in England.

Sri. K. T. BHASHYAM.— In England also. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಅನುಸರಿಸಿದರೆ ಅದರಲ್ಲಿ ಅನುಕೂಲಗಳಿವೆ. ಮುಖ್ಯವಾಗಿ ಅದರಲ್ಲಿರತಕ್ಕ ಸಾಧಕಬಾಧಕಗಳ ವಿಷಯವಾಗಿ ಎರಡೆರಡು ಮಾತುಗಳನ್ನು ಹೇಳಬೇಕಾದರೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಸಣ್ಣ ಕ್ಷೇತ್ರವಾಗಿ ಇರುತ್ತದೆ. ಸಣ್ಣ ಕ್ಷೇತ್ರವಾಗಿರುವುದರಿಂದ ನಮ್ಮಾರು 75 ಸಾವಿರ ಅಥವಾ 80 ಸಾವಿರ ಪ್ರಜೆಗಳಿಗೆ ಒಬ್ಬ ಪ್ರತಿನಿಧಿಯಂತೆ ಚುನಾವಣೆ ಮಾಡಬೇಕಾಗುತ್ತದೆ. ಅದರಲ್ಲಿ ಓಟರುಗಳು ಎಷ್ಟು ಆಗುತ್ತಾರೆ? Just a little less than half; say about 36 or 37 thousand. Therefore the voters can bring pressure to bear upon that individual. ಅಷ್ಟು ಓಟರುಗಳನ್ನು ಉಮೇದುವಾರರು ನೋಡಿದರೆ ಸಾಕಾಗುತ್ತದೆ. ಅಷ್ಟಕ್ಕೇ ಅವರು ತೃಪ್ತರಾಗಬಹುದು, ತಕ್ಕ ಏರ್ಪಾಡುಮಾಡಿಕೊಳ್ಳಬಹುದು. ಸಣ್ಣ ಕ್ಷೇತ್ರವಾದುದರಿಂದ ಓಟರುಗಳನ್ನೆಲ್ಲಾ ಉಮೇದುವಾರರು ನೋಡಿಕೊಳ್ಳುವುದಕ್ಕೂ, ಓಟರುಗಳು ಉಮೇದುವಾರರಮೇಲೆ ಹತೋಟಿ ಇಟ್ಟುಕೊಳ್ಳುವುದಕ್ಕೂ ಅವಕಾಶವಿರುತ್ತದೆ. ಮತ್ತು ಅಲ್ಲ ಏನೇ ಆಗಲೀ, ಏನೇ ಹೋಗಲಿ ಅದರ ಕೀರ್ತಿ, ಅಪಕೀರ್ತಿ ಅವರ ಮೇಲಿರುತ್ತದೆ. ಅದು ಅವರ ಜವಾಬ್ದಾರಿ. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಲ್ಲಿ 3—4 ಜನ ಇರುವ ಕಡೆ ಅವರು ಇನ್ನೊಬ್ಬರಕಡೆ ಕೈತೋರಿಸಬಹುದು. ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಇರುವಕಡೆ ಒಬ್ಬರಿಗೊಬ್ಬರಿಗೆ ಬಹಳ ನುಲಭವಾಗಿ ಮಿಳಿತವಾಗಬಹುದು because the area is small and from another point of view the expenditure involved will be very small because a candidate will have to look only to that small area. Wherea's if you have a plural-member constituency the area will be very big and unless they all combine together and make a sort of a party of four or five it will be very difficult and therefore a single-member constituency has got a number of advantages. ಪಾರ್ಟಿ ಪದ್ಧತಿ ಸುಗಮವಾಗಿ ನಡೆಯುವುದಕ್ಕೂ ಸಹ ಅನುಭವದಮೇಲೆ ಸಿಂಗಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಒಳ್ಳೆಯದೆಂದು ಅಭಿಪ್ರಾಯಪಟ್ಟಿದ್ದಾರೆ. ಮೇಜರ್ ಪಾರ್ಟಿ, ಅದಕ್ಕೆ ತಕ್ಕಂಥ ವಿರೋಧ ಪಾರ್ಟಿ—ಈ ಎರಡೂ ಚೆನ್ನಾಗಿ ಕೆಲಸ ಮಾಡುವುದಕ್ಕೆ ಅನುಕೂಲವಾಗುತ್ತದೆ. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಮಾಡಿದರೆ ಯಾವ ಪಾರ್ಟಿ ಬಲಯುತವಾಗುತ್ತದೆಯೋ ಆ ಪಾರ್ಟಿ ಮುಂದಕ್ಕೆ ಬರುತ್ತದೆ. ಒಬ್ಬರನ್ನೊಬ್ಬರು ಉರುಳಿಸುವುದು, ಫ್ರಾನ್ಸ್‌ನಲ್ಲಿ ಆದಹಾಗೆ ಆಗುತ್ತದೆ.

In fact the stability of the British Parliament is largely attributable to the fact that single-member constituencies are in vogue there and the majority is facing an almost equally strong and powerful opposition party. In France where you have plural-member constituencies you find the thing tumbling down almost every other day. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿಯಲ್ಲಿ ಸಾಧಕಗಳೂ ಇವೆ. ಅದರಲ್ಲಿ ಅಲ್ಪಸಂಖ್ಯಾತರಿಗೂ ಅವಕಾಶ ಸಿಕ್ಕುತ್ತದೆ. ಅವರಿಗೆ ಒಂದು ಓಟು ಕೊಟ್ಟಿದ್ದೀರಿ. ನನಗೂ ಒಂದು ಓಟು ಕೊಡಿ ಎಂದು ಕೇಳಬಹುದು. ನಮ್ಮ ದೇಶದಲ್ಲಿ ಧರ್ಮಬುದ್ಧಿ ಇರತಕ್ಕವರು ಹೆಚ್ಚಾಗಿದ್ದಾರೆ. ಅವರಿಗೂ ಒಂದು ಕೊಟ್ಟು, ಇವರಿಗೂ ಒಂದು ಕೊಡೋಣ ಎನ್ನುತ್ತಾರೆಯೇ ಹೊರತು ಅವರು ಅರ್ಹರೇ ಅಲ್ಲವೆ ಎಂಬುದೆನ್ನು ಯೋಚನೆ ಮಾಡುವಷ್ಟು ದೂರ ಹೋಗುವುದಿಲ್ಲ. ಇಂಗ್ಲೆಂಡಿನಲ್ಲಿ ಪ್ರಜಾಪ್ರಭುತ್ವವನ್ನು ಅಭ್ಯಾಸಮಾಡಿರತಕ್ಕವರೂ ತಪ್ಪುದಾರಿಯಲ್ಲಿ ಹೋಗುತ್ತಾರೆ. ಅಂಥಾದ್ದರಲ್ಲಿ ನಮ್ಮಲ್ಲೂ ತಪ್ಪುದಾರಿಗೆ ಎಳೆಯುತ್ತಾರೆ, ಆದರೂ ಅಲ್ಪಸಂಖ್ಯಾತರಿಗೆ ಸ್ವಲ್ಪ ಅನುಕೂಲವಾಗುತ್ತದೆ. ಪ್ಲೂರಲ್ ಮೆಂಬರ್ ಕಾನ್ಸ್ಟಿಟ್ಯುಯೆನ್ಸಿ ಬಂದರೆ ಸರ್ವೇ ಸಾಧಾರಣವಾಗಿ ಅದರಲ್ಲೂ ಪಾರ್ಟಿಪದ್ಧತಿ ಕಟ್ಟುವುದಕ್ಕೆ ಅನುಕೂಲವಾಗುತ್ತದೆ. ಆದರೆ ಪಾರ್ಟಿಗಳು ಛಿದ್ರಛಿದ್ರವಾಗುಗುತ್ತವೆ. ಒಮ್ಮುಖವಾಗಿ ಕೆಲಸಮಾಡುವ ಪಾರ್ಟಿ ಕಟ್ಟುವುದಕ್ಕೆ ಕಷ್ಟವಾಗುತ್ತದೆ. A large area will have to be covered by each candidate. It will involve a great deal of expenditure for the candidate and also for the Government because we will have to provide electoral constituencies for all the entire big place whereas if it is a small place it will be a small constituency and therefore you need not have to spend so much on it. ಹೀಗೆ ಅದನ್ನೆಲ್ಲಾ ಆಯಾ ಪ್ರದೇಶದ ಸಾಧಕ ಬಾಧಕಗಳನ್ನು ಆಲೋಚಿಸಿ ತೀರ್ಮಾನ ಮಾಡಬೇಕಾಗುತ್ತದೆ. ಬಹು ಸದಸ್ಯ ಚುನಾವಣಾಕ್ಷೇತ್ರ ಪದ್ಧತಿಯಿಂದ ಇನ್ನೊಂದು ತರದ ಕಷ್ಟ ಬರುತ್ತದೆ. ಓಟು ಮಾಡುವ ಪದ್ಧತಿ

